
ಮನುಷ್ಯ ಜಾತಿ
ತಾನೊಂದೆ ವಲಂ

ಚೆನ್ನವೀರ ಕಣವಿ



ಸುನೀತ ಸಂಪದ

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಮಾಲಿಕೆ ಪ್ರಕಟಣೆ

ಸುನೀತ ಸಂಪದ

ಚೆನ್ನವೀರ ಕಣವಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

Kannada Sahitya Parishattu Centenary Publication

ಸುನೀತ ಸಂಪದ

ಚೆನ್ನವೀರ ಕಣವಿ

ಪ್ರಕಾಶಕರು :

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ
ಬೆಂಗಳೂರು – ೫೬೦ ೦೧೮

ಮುಖಪುಟ ವಿನ್ಯಾಸ : ಶ್ರೀ ಪ.ಸ. ಕುಮಾರ್
ಪುಟಗಳು : ೨೮೫
ಮುದ್ರಣ ಕಾಗದ : ೮೦ ಜಿ.ಎಸ್.ಎಂ.
ಎನ್.ಎಸ್.ಮ್ಯಾಪ್‌ಲಿಥೋ

ಬೆಲೆ : ೧೮೦=೦೦

ಪ್ರಥಮ ಮುದ್ರಣ ವರ್ಷ : ೨೦೦೨

ಪರಿಷತ್ತಿನಿಂದ ಪ್ರಥಮಾವೃತ್ತಿ : ೨೦೧೪

ಪ್ರತಿಗಳು : ೧೦೦೦

ಮುದ್ರಣ
ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
೩/೪, ಮೊದಲನೇ ಮುಖ್ಯರಸ್ತೆ
ನ್ಯೂ ತರಗುಪೇಟೆ
ಬೆಂಗಳೂರು – ೫೬೦ ೦೦೨.

ISBN - 978 - 93 - 82446 - 42 - 2

SUNEETHA SAMPADA - a collection of Sonnets in Kannada by Chennaveera Kanavi

published by :

Kannada Sahitya Parishattu
Pampa Mahakavi Road
Chamarajapete
Bengaluru - 560018

Cover Page : Sri P.S. Kumar
Pages : 285
Paper : 80 G.S.M. N.S. Maplitho

Rs : 180=00

Year of Publication : 2002

Edition by Parishattu : 2014

Copies : 1000

printed at
Omkar Offset Printers
3/4, 1st Main Road
New Taragupete
Bengaluru - 560002.

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಕೃತಿಗಳ ಆಯ್ಕೆ ಸಮಿತಿ

ಅಧ್ಯಕ್ಷರು

ಶ್ರೀ ಪುಂಡಲೀಕ ಹಾಲಂಬಿ

ಸದಸ್ಯರು

ಡಾ. ಸಿದ್ಧಲಿಂಗಯ್ಯ

ಪ್ರೊ. ಜಿ. ಅಶ್ವತ್ಥನಾರಾಯಣ

ಡಾ. ಶ್ಯಾಮಸುಂದರ ಬಿದರಕುಂದಿ

ಡಾ. ರಾಜಶೇಖರ ಹತಗುಂದಿ

ಡಾ. ತಾರಿಣಿ ಶುಭದಾಯಿನಿ

ಡಾ. ಮಾಧವ ಪೆರಾಜೆ

ಶ್ರೀ ಸಂಗಮೇಶ ಬಾದವಾಡಗಿ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಶ್ರೀ ಸಿ.ಕೆ. ರಾಮೇಗೌಡ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಶ್ರೀ ಪಿ. ಮಲ್ಲಿಕಾರ್ಜುನಪ್ಪ, **ಗೌರವ ಕೋಶಾಧ್ಯಕ್ಷ, ಕ.ಸಾ.ಪ.**

ಪ್ರಕಟಣಾ ಸಮಿತಿ ಸಂಚಾಲಕ

ಶ್ರೀ ಜೆ.ಎನ್. ಶಾಮರಾವ್

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಕಾರ್ಯಕಾರಿ ಸಮಿತಿ

ಶ್ರೀ ಪುಂಡಲೀಕ ಹಾಲಂಬಿ., ಅಧ್ಯಕ್ಷರು
ಶ್ರೀ ಸಂಗಮೇಶ ಬಾದವಾಡಗಿ, ಗೌರವ ಕಾರ್ಯದರ್ಶಿ
ಶ್ರೀ ಸಿ.ಕೆ. ರಾಮೇಗೌಡ, ಗೌರವ ಕಾರ್ಯದರ್ಶಿ
ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷ

ಶ್ರೀ ಟಿ. ತಿಮ್ಮೇಶ್, ಬೆಂಗಳೂರು ನಗರ
ಶ್ರೀ ಹುಲಿಕಲ್ ನಟರಾಜ್, ಬೆಂ. ಗ್ರಾಮಾಂತರ
ಶ್ರೀ ಬಿ.ಟಿ. ನಾಗೇಶ್, ರಾಮನಗರ
ಶ್ರೀ ಜೆ.ಜಿ. ನಾಗರಾಜ, ಕೋಲಾರ
ಶ್ರೀ ವೈ.ಎಲ್. ಹನುಮಂತರಾವ್, ಚಿಕ್ಕಬಳ್ಳಾಪುರ
ಡಾ. ಸೋ.ಮು. ಭಾಸ್ಕರಾಚಾರ್ಯ, ತುಮಕೂರು
ಶ್ರೀ ಆರ್. ಮಲ್ಲಿಕಾರ್ಜುನಯ್ಯ, ಚಿತ್ರದುರ್ಗ
ಶ್ರೀ ಎ.ಆರ್. ಉಜ್ಜನಪ್ಪ, ದಾವಣಗೆರೆ
ಶ್ರೀ ಡಿ.ಮಂಜುನಾಥ್, ಶಿವಮೊಗ್ಗ
ಡಾ. ಎಂ. ಚಂದ್ರಶೇಖರ್, ಮೈಸೂರು
ಶ್ರೀ ಸೋಮಶೇಖರ ಬಿಸಲ್ವಾಡಿ, ಚಾಮರಾಜನಗರ
ಶ್ರೀಮತಿ ಮೀರಾ ಶಿವಲಿಂಗಯ್ಯ, ಮಂಡ್ಯ
ಡಾ. ಎಚ್.ಎಲ್. ಜನಾರ್ಧನ, ಹಾಸನ
ಶ್ರೀ ಟಿ.ಪಿ.ರಮೇಶ್, ಕೊಡಗು
ಶ್ರೀ ಎನ್.ಎಸ್. ಶಿವಸ್ವಾಮಿ, ಚಿಕ್ಕಮಗಳೂರು
ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ
ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ
ಶ್ರೀ ಯ.ರು. ಪಾಟೀಲ, ಬೆಳಗಾವಿ
ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಾಪುರ
ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಬಾಗಲಕೋಟೆ
ಡಾ. ಲಿಂಗರಾಜ ರು. ಅಂಗಡಿ, ಧಾರವಾಡ
ಶ್ರೀ ಗುರುಶಾಂತಪ್ಪ ಬಿ. ಮಾಸಣಗಿ, ಹಾವೇರಿ
ಡಾ. ಶಿವಪ್ಪ ಮರಿಬಸಪ್ಪ ಕುರಿ, ಗದಗ

ಶ್ರೀ ರೋಹಿದಾಸ ನಾಯಕ, ಉತ್ತರ ಕನ್ನಡ
ಶ್ರೀ ಮಹಿಪಾಲರೆಡ್ಡಿ ಮುನ್ನೂರ, ಗುಲ್ಬರ್ಗ
ಶ್ರೀ ಸಿದ್ದಪ್ಪ ಎಸ್. ಹೊಟ್ಟಿ, ಯಾದಗಿರಿ
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ, ಬೀದರ್
ಶ್ರೀ ಮಹಾಂತೇಶ ಮಸ್ಕಿ, ರಾಯಚೂರು
ಶ್ರೀ ವೀರಪ್ಪ ಮ. ನಿಂಗೋಜಿ, ಕೊಪ್ಪಳ
ಶ್ರೀ ಸಿರಿಗೇರಿ ಯರ್ರಿಸ್ವಾಮಿ, ಬಳ್ಳಾರಿ
ಶ್ರೀ ಎಚ್.ಬಿ.ಎಲ್.ರಾವ್, ಮಹಾರಾಷ್ಟ್ರ
ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ
ಶ್ರೀ ಕೆ.ಪಿ.ಆಚಾರ್ಯ, ತಮಿಳುನಾಡು
ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ
ಡಾ. ನಾ. ಡಿಸೋಜ
೮೦ನೇ ಅ.ಭಾ.ಕ.ಸಾ. ಸಮ್ಮೇಳನಾಧ್ಯಕ್ಷರು
ಡಾ. ನಲ್ಲೂರು ಪ್ರಸಾದ್ ಆರ್.ಕೆ.
ನಿಕಟಪೂರ್ವ ಅಧ್ಯಕ್ಷರು
ಡಾ. ವಿಜಯದೇವಿ ಎಸ್.ಎಸ್.
ಮಹಿಳಾ ವಿ.ವಿ. ಪ್ರತಿನಿಧಿ
ಡಾ. ತಂಬಂಡ ವಿಜಯ್ ಪೂಣಚ್ಚ
ಕನ್ನಡ ವಿ.ವಿ.ಪ್ರತಿನಿಧಿ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಶ್ರೀಮತಿ ಬಿ.ಟಿ. ಲಲಿತಾ ನಾಯಕ್
ಮಹಿಳಾ ಪ್ರತಿನಿಧಿ
ಡಾ. ಕಾ.ವೆಂ. ಶ್ರೀನಿವಾಸಮೂರ್ತಿ
ಪರಿಶಿಷ್ಟ ಜಾತಿ ಪ್ರತಿನಿಧಿ
ಶ್ರೀ ಬಿ.ಎಚ್. ಸತೀಶ್‌ಗೌಡ
ಸಂಘಸಂಸ್ಥೆಗಳ ಪ್ರತಿನಿಧಿ

ಅಧ್ಯಕ್ಷರ ಮಾತು

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ನಾಡು, ನುಡಿ, ಸಾಹಿತ್ಯಕ್ಕೆ ಪ್ರೇರಕಶಕ್ತಿಯಾಗಿ ಹಾಗೂ ಪೋಷಕವಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೫-೫-೧೯೧೫ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನ್‌ರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಸಂಸ್ಥಾಪನೆಗೊಂಡಿತು. ಈವರೆಗೆ ೨೪ ಜನ ಅಧ್ಯಕ್ಷರು ಪರಿಷತ್ತಿನ ಸೇವೆ ಸಲ್ಲಿಸಿದ್ದಾರೆ. ೮೧ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯನ್ನು ೭೯ ಜನ ಮಹಾನ್ ಲೇಖಕರು ಅಲಂಕರಿಸಿದ್ದಾರೆ. ೮೩ ಜನ ಸದಸ್ಯರಿಂದ ಆರಂಭಗೊಂಡ ಪರಿಷತ್ತಿನ ಇಂದಿನ ಸದಸ್ಯರ ಸಂಖ್ಯೆ ೨,೦೨,೦೦೦. ಪರಿಷತ್ತಿನ ಪ್ರಕಟಣೆಗಳ ಸಂಖ್ಯೆ ೧೪೨೪. ಕೇವಲ ಅಂಕಿಸಂಖ್ಯೆಯ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆ ಅನನ್ಯವಾದುದು; ಇನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಯಂತೂ ಅವಿಸ್ಮರಣೀಯವಾದುದು.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಕೆಲವೊಂದು ಮಹತ್ವದ ಯೋಜನೆಗಳನ್ನು ಪರಿಷತ್ತು ಕೈಗೊಂಡಿರುತ್ತದೆ. ಮೊದಲನೆಯದಾಗಿ, ಎರಡು ಶತಮಾನಗಳಿಗೂ ಮೀರಿದ ಅವಧಿಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳ ರಚನೆ ಹಾಗೂ ಪ್ರಕಟಣೆ. ಈ ೧೭ ಸಂಪುಟಗಳ ರಚನೆಯ ಕಾರ್ಯದಲ್ಲಿ ಈಗಾಗಲೇ ಪರಿಣಿತ ಸಂಪಾದಕರು ಹಾಗೂ ನೂರಾರು ಲೇಖಕರು ಕ್ರಿಯಾಶೀಲರಾಗಿದ್ದಾರೆ. ಎರಡನೆಯದಾಗಿ, ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾಗಿ ಕನ್ನಡದ ನೂರು ಮೌಲಿಕ ಗ್ರಂಥಗಳ ಮುದ್ರಣ. ಜೊತೆಗೆ, ಪರಿಷತ್ತಿನ ನೂರು ವರ್ಷಗಳ ಇತಿಹಾಸವನ್ನು ದಾಖಲಿಸುವ ನೆನಪಿನ ಸಂಪುಟದ ಪ್ರಕಟಣೆ.

‘ಕನ್ನಡ ಸಾಹಿತ್ಯ ಪರಿಷತ್ತು ಶತಮಾನ : ಕೃತಿ ನೂರು’ ಎಂಬ ಯೋಜನೆಯಡಿ ಪುಸ್ತಕಗಳ ಆಯ್ಕೆಗೆ ಪರಿಣಿತರ ಸಮಿತಿಯನ್ನು ರಚಿಸಲಾಯಿತು. ಈ ಆಯ್ಕೆ ಸಮಿತಿಯು ನೂರು ಪುಸ್ತಕಗಳನ್ನು ಆಯ್ಕೆಮಾಡಿ ಕೊಟ್ಟಿರುತ್ತದೆ. ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆಗಳನ್ನು ಆಯ್ಕೆ ಸಮಿತಿಯು ಗಮನದಲ್ಲಿರಿಸಿಕೊಂಡು ನೂರು ಪುಸ್ತಕಗಳನ್ನು ಆಯ್ಕೆ ಮಾಡಿರುತ್ತದೆ. ಇದರಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು

ಪರಿಗಣಿಸಲಾಗಿದೆ. ಈಗಾಗಲೇ ಸಮಗ್ರವಾಗಿ ಲಭ್ಯವಿರುವ ಹಾಗೂ ಮತ್ತೆ ಮತ್ತೆ ಪುನರ್‌ಮುದ್ರಿತವಾಗಿರುವ ಕೃತಿಗಳಿಗೆ ಆದ್ಯತೆ ನೀಡಿಲ್ಲವಾಗಿದ್ದರೂ, ಒಟ್ಟಾರೆ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿರುವ ಲೇಖಕರನ್ನು ಬಹುಮಟ್ಟಿಗೆ ಉಳಿಸಿಕೊಳ್ಳಲಾಗಿದೆ. ಇಂಥ ಮಹತ್ವದ ಪುಸ್ತಕಗಳ ಪಟ್ಟಿಯನ್ನು ಸಿದ್ಧಪಡಿಸಿಕೊಟ್ಟ ಆಯ್ಕೆ ಸಮಿತಿ ಸದಸ್ಯರಾದ ಡಾ. ಸಿದ್ಧಲಿಂಗಯ್ಯ, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಶ್ಯಾಮಸುಂದರ ಬಿದರಕುಂದಿ, ಡಾ. ರಾಜಶೇಖರ ಹತಗುಂದಿ, ಡಾ. ತಾರಿಣಿ ಶುಭದಾಯಿನಿ ಹಾಗೂ ಡಾ. ಮಾಧವ ಪೆರಾಜೆ ಅವರಿಗೆ ನನ್ನ ಕೃತಜ್ಞತೆಗಳು.

ಈ ನೂರು ಕೃತಿಗಳನ್ನು ಏಕ ಚೌಕಟ್ಟಿನಲ್ಲಿ, ಆದರೆ ವಿವಿಧ ಕಲಾವಿನ್ಯಾಸಗಳಲ್ಲಿ ಮುದ್ರಿಸಲು ಸಹ ಯೋಜಿಸಲಾಗಿದೆ. ಸಾಧ್ಯವಾದ ಮಟ್ಟಿಗೂ ಒಟ್ಟಾರೆ ಗುಣಮಟ್ಟದಲ್ಲಿ ಏಕರೂಪತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಪರಿಷತ್ತಿನ ಈ ಯೋಜನೆಯಡಿ ತಮ್ಮ ಕೃತಿಯನ್ನು ಪುನರ್‌ಮುದ್ರಿಸಲು ಅನುಮತಿಗಾಗಿ ಶ್ರೀ ಚೆನ್ನವೀರ ಕಣವಿ ಅವರನ್ನು ಕೋರಿದಾಗ, ಪರಿಷತ್ತಿನ ಮೇಲಿನ ಗೌರವದಿಂದಾಗಿ ಅವರು ತಮ್ಮ ಒಪ್ಪಿಗೆಯನ್ನು ನೀಡಿ ಹೃತ್ಪೂರ್ವಕವಾಗಿ ಸಹಕರಿಸಿದ್ದಾರೆ. ಅವರಿಗೆ ನನ್ನ ಗೌರವಪೂರ್ವಕ ಕೃತಜ್ಞತೆಗಳು.

ಈ ಮೊದಲ ಕಂತಿನ ಪುಸ್ತಕಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಮೆ॥ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ದಿನಾಂಕ : ೫.೫.೨೦೧೪
ಬೆಂಗಳೂರು

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಅರಿಕೆ

(ಪ್ರಥಮ ಆವೃತ್ತಿ)

ನನ್ನ ಕಾವ್ಯ ರಚನೆಯ ಪ್ರಾರಂಭದಿಂದಲೂ ಸುನೀತ (ಸಾನೆಟ್) ಅದು ಹೇಗೊ ನನ್ನ ಮನಸ್ಸನ್ನು ಆಕರ್ಷಿಸಿಬಿಟ್ಟಿತು. ಹಿರಿಯ ಕವಿಗಳಾದ ಗೋವಿಂದ ಪೈ, ಶ್ರೀನಿವಾಸ, ಬೇಂದ್ರೆ, ಕುವೆಂಪು, ವಿನಾಯಕ, ಪು. ತಿ. ನ. ಮೊದಲಾದವರ ವಿವಿಧ ಪ್ರಕಾರದ ರಚನೆಗಳೂ ನನ್ನ ಕಣ್ಣೆದುರಿಗಿದ್ದವು. ಇಂಗ್ಲಿಷ್ ಕವಿಗಳ ಕೃತಿಗಳನ್ನೂ ತಕ್ಕಮಟ್ಟಿಗೆ ನೋಡಿದ್ದೆ. ಇದೆಲ್ಲದರ ಪರಿಣಾಮವಾಗಿ ನನ್ನ ಪ್ರಥಮ ಕಾವ್ಯ ಸಂಕಲನ 'ಕಾವ್ಯಾಕ್ಷಿ'ಯಲ್ಲಿಯೇ ಹದಿನಾಲ್ಕು ಸುನೀತಗಳಿರುವುದನ್ನು ಗಮನಿಸಬಹುದು. ಆಮೇಲೆ ಸಾಮಾನ್ಯವಾಗಿ ನನ್ನ ಎಲ್ಲ ಕವನ ಸಂಗ್ರಹಗಳಲ್ಲಿಯೂ ('ಭಾವಜೀವಿ', 'ಮಣ್ಣಿನ ಮೆರವಣಿಗೆ'ಗಳನ್ನು ಹೊರತುಪಡಿಸಿ) ಸುನೀತಗಳು ಹೆಚ್ಚೂ ಕಡಿಮೆ ಅಚ್ಚಾಗುತ್ತಲೇ ಬಂದಿವೆ. ಜೊತೆಗೆ ಓದುಗರ ಹಾಗೂ ವಿಮರ್ಶಕರ ಮೆಚ್ಚುಗೆ ಕೂಡ ಆಗಾಗ ಸಲ್ಲುವೆಡೆಗಳಲ್ಲಿ ಸಂದಿವೆ.

ಕಾವ್ಯಪ್ರೇಮಿಗಳ ಅಪೇಕ್ಷೆಯಂತೆ, ನಾನು ಇದುವರೆಗೆ (೨೦೦೧) ಬರೆದ ಸುನೀತಗಳ ಪ್ರತ್ಯೇಕ ಸಂಕಲನವೊಂದು ಪ್ರಕಟಗೊಳ್ಳುವ ಸುಯೋಗ ಇದೀಗ ಒದಗಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ವಸ್ತು – ರೂಪಗಳ ವೈವಿಧ್ಯದಂತೆಯೇ ಅಲ್ಲಲ್ಲಿ ಹೊಸ ಪ್ರಯೋಗಗಳನ್ನು ಒಳಗೊಂಡ ಒಟ್ಟು ೧೮೨ ಕವನಗಳು 'ಸುನೀತ ಸಂಪದ'ದಲ್ಲಿವೆ. ಪ್ರಾರಂಭದಲ್ಲಿ ಸರಳ – ಸುಲಭ ಎನಿಸಿದ್ದು ಭಾವ – ಭಾಷೆ ಛಂದ– ಬಂಧದಲ್ಲಿ ಬರಬರುತ್ತ ಸಂಕೀರ್ಣಗೊಳ್ಳುತ್ತ ನನ್ನ ಮನಸ್ಸಿನ ಅಗತ್ಯಗಳಿಗೆ ತಕ್ಕಂತೆ ಈ ಸಾನೆಟ್ ಶಿಲ್ಪರೂಪಗೊಳ್ಳುತ್ತ ಬಂದಿದೆ. ಇವುಗಳ ಸೂಕ್ಷ್ಮವಾದ ಕೆತ್ತನೆಯ ಕೆಲಸದಲ್ಲಿ ನಾನು ಸಂತೋಷಪಟ್ಟಿದ್ದೇನೆ.

ಇಲ್ಲಿಯ ಕವನಗಳನ್ನು ಸ್ಥೂಲವಾಗಿ ಐದು ಭಾಗಗಳಾಗಿ ವಿಂಗಡಿಸುವಲ್ಲಿ ಡಾ. ಶ್ಯಾಮಸುಂದರ ಬಿದರಕುಂದಿಯವರು ನೆರವಾಗಿದ್ದಾರೆ. ಆಯಾ ಸಂದರ್ಭಗಳ ಔಚಿತ್ಯ ಹಾಗೂ ಕಾವ್ಯದ ಬೆಳವಣಿಗೆಯನ್ನು ಗುರುತಿಸುವ ದೃಷ್ಟಿಯಿಂದ ಕಾಲಾನುಕ್ರಮವನ್ನು ಕಾಣಿಸಲಾಗಿದೆ. ಡಾ. ರಾಜೇಂದ್ರ ಚೆನ್ನಿಯವರ ಪ್ರಸ್ತಾವನೆ ಪ್ರಸ್ತುತ ಸಂಗ್ರಹವನ್ನು ಕುರಿತಾಗಿದ್ದರೂ ಹೊಸಗನ್ನಡ ಕಾವ್ಯದ ಸಂಕ್ರಮಣ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಒಟ್ಟು ನನ್ನ ಕಾವ್ಯದ ಪುನರ್ವಿಮರ್ಶೆಗೈದು ಉಪಕರಿಸಿದ್ದಾರೆ. ಸಾರವತ್ತಾದ ಬೆನ್ನುಡಿಯಿಂದ ಡಾ. ಜಿ. ಎಸ್. ಶಿವರುದ್ರಪ್ಪನವರು ಈ ಕೃತಿಯ ಬೆಲೆಯನ್ನು ಹೆಚ್ಚಿಸಿದ್ದಾರೆ. ಇವರೆಲ್ಲರ ಪ್ರೀತಿಗೆ ನಾನು ತುಂಬ ಋಣಿ.

ಅರ್ಥಪೂರ್ಣವಾದ ಮುಖಪುಟ ಚಿತ್ರಿಸಿದ ಸುಧಾಕರ ದರ್ಬೆ, ವಿಭಾಗಗಳಿಗೆ ತಕ್ಕ ರೇಖಾಚಿತ್ರ ಬಿಡಿಸಿದ ಎಂ. ಆರ್. ಬಾಳಿಕಾಯಿ, ಒಪ್ಪುವ ಭಾವಚಿತ್ರ ನೀಡಿದ ಡಾ. ಎಚ್. ಚಂದ್ರಶೇಖರ – ಇವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಈ ಸಂಕಲನದ ಹಸ್ತಪ್ರತಿ ಸಿದ್ಧವಾಗಿ ಒಂದು ಸಂದಿಗ್ಧ ಪರಿಸ್ಥಿತಿಯನ್ನೆದುರಿಸುತ್ತಿರುವಾಗ ಎಳ್ಳಷ್ಟು ಹಿಂದೆಮುಂದೆ ನೋಡದೆ ಇದನ್ನು ತಮಗೆ ಬೇಕೆಂದು ಎತ್ತಿಕೊಂಡವರು ಬಳ್ಳಾರಿಯ 'ಲೋಹಿಯಾ ಪ್ರಕಾಶನ'ದ ಶ್ರೀ. ಸಿ. ಚನ್ನಬಸವಣ್ಣನವರು. ನೋಡನೋಡುತ್ತಿರುವಂತೆಯೇ ಕನ್ನಡ ಪ್ರಕಾಶನ ಕ್ಷೇತ್ರದಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಮೆರೆದಿರುವ ಅವರ ಸತ್ವಪೂರ್ಣ ಸಾಹಸಕ್ಕಾಗಿ ಅಭಿನಂದಿಸಿ ಅವರಿಗೂ ಹಾಗೆಯೇ ಆತ್ಮೀಯರಾದ ಡಾ. ಗುರುಲಿಂಗ ಕಾಪಸೆಯವರಿಗೂ ತುಂಬು ಹೃದಯದ ಕೃತಜ್ಞತೆಗಳು.

ಚೆನ್ನವೀರ ಕಣವಿ

ಧಾರವಾಡ
ವಿಜಯದಶಮಿ
೧೫-೧೦-೨೦೦೨

ಪ್ರಸ್ತಾವನೆ

ನವ್ಯದ ಏರುಗಾಲದಲ್ಲಿ ಕಾವ್ಯದ ಉದ್ದೇಶ, ಸಾಫಲ್ಯ ಮತ್ತು ಆಕೃತಿಯ ಬಗ್ಗೆ ಸ್ವಲ್ಪಮಟ್ಟಿಗೆ ಏಕಮುಖವಾದ ನಿರೀಕ್ಷೆಗಳನ್ನು ಪಡೆದುಕೊಂಡ ನನ್ನ ಓರಿಗೆಯ ಕೆಲವರಿಗಾದರೂ ಬೇರೆ ಬಗೆಯ ಆಕಾಂಕ್ಷೆಗಳಿರುವ ಕಾವ್ಯಕ್ಕೆ ತೆರೆದುಕೊಳ್ಳುವುದು ಸ್ವಲ್ಪವಾದರೂ ತಡವಾಯಿತೆಂದು ತೋರುತ್ತದೆ. ನವ್ಯ ವಿಮರ್ಶೆಯ ಆಕ್ರಾಮಕವಾದ ವೈಚಾರಿಕ ಆಕೃತಿಗಳು ಒಂದು ಬಗೆಯ ಆಂಶಿಕವಾದ ಕಿವುಡುತನವನ್ನು ನಮ್ಮಲ್ಲಿ ಹುಟ್ಟುಹಾಕಿದವು. ಗಂಭೀರ ಉದ್ದೇಶಗಾರಿಕೆಯಿಂದ, ಬರೆದ ಒಂದೊಂದು ಸಾಲೂ ಅಖಂಡ ಕಾವ್ಯ ವ್ಯಕ್ತಿತ್ವವೊಂದರ ಅಭಿವ್ಯಕ್ತಿಯಾಗುವ ಹಾಗೆ, ಸಮಗ್ರ ಕಾವ್ಯದ ಖಚಿತವಾದ ಒಟ್ಟಂದದಲ್ಲಿ ಸೇರಿಕೊಳ್ಳುವ ಒಂದು ಬಿಡಿ ಕವನವನ್ನು ರಚಿಸುವುದೂ ಅನೈತಿಕವೆಂದುಕೊಳ್ಳದ ಕವಿಗಳ ಬಗ್ಗೆ ಅನಾದರವು ಬೆಳೆಯುವಂತಾಯತು. "ಯಾರೋ ಕವನ ಹೊಸೆಯುತ್ತಾರೆ" ಎಂದರೆ ಅವರು ಯಾಂತ್ರಿಕವಾದ ಸಾಮರ್ಥ್ಯದಿಂದ ಸಾಂದರ್ಭಿಕವಾಗಿ ಕಾವ್ಯ ಬರೆಯುತ್ತಾರೆಯೆ ಹೊರತು ಆಳವಾದ ಸೃಜನಶೀಲತೆಯ ಕೇಂದ್ರವೊಂದರಿಂದ ಬರೆಯುವುದಿಲ್ಲವೆಂದು ನಮ್ಮ ಭಾವನೆಯಾಗಿತ್ತು. ಈಗ ಹಿನ್ನೋಟದಲ್ಲಿ ನವ್ಯ ವಿಮರ್ಶೆಯ ಈ ಉಗ್ರ ಬ್ರಾಹ್ಮಣಶಾಹಿ ಧೋರಣೆಗಳು ವಿಚಿತ್ರವಾಗಿ ಕಾಣುತ್ತವೆ. ಅವುಗಳಿಂದ ಪ್ರಯೋಜನವಾಗಲಿಲ್ಲವೆಂದಲ್ಲ. ವಾಚಾಳಿತನ, ಸ್ವಂತದ್ದು ಹೇಳಲಿಕ್ಕೆ ಏನೂ ಇಲ್ಲದಿದ್ದರೂ ಕವಿತೆಯೆನ್ನುವ ಗತ್ತಿನಿಂದ ಬರೆಯುತ್ತಲೇ ಇರುವುದು – ಇವೇ ಮುಂತಾದ ಪ್ರಶ್ನಾತೀತ ಭ್ರಮೆಗಳಿದ್ದ ಅನೇಕ ನವೋದಯ ಕವಿಗಳಿಂದ ಕಾವ್ಯದ ಆರೋಗ್ಯವಂತಿಕೆಯನ್ನು ಉಳಿಸುವುದು ಸಾಧ್ಯವಾಯಿತು. ವಸಾಹತೋತ್ತರ ಸಂದರ್ಭದ ತಳಮಳ ಮತ್ತು ವಿಶಿಷ್ಟ ತುಡಿತಗಳಿಗೆ ಸಂಧಿಭೂಮಿಯಾಗಬಲ್ಲ ಹೊಸ ಕಾವ್ಯಕ್ಕೆ ಸಾಂಸ್ಕೃತಿಕ ಅವಕಾಶವನ್ನು (Space) ಕಲ್ಪಿಸಿಕೊಡುವುದು ನವ್ಯ ವಿಮರ್ಶೆಯಿಂದ ಸಾಧ್ಯವಾಯಿತು. ಆದರೆ ಗಲಿಬಿಲಿಯಲ್ಲಿ ಎಂದಿನಿಂದಲೂ ಅಪ್ಪಟ ಶೂದ್ರವೇ ಆಗಿರುವ ಕನ್ನಡ ಕಾವ್ಯ ಬಹುದನಿಯ ಕಾವ್ಯವೆನ್ನುವ ವಿವೇಕವನ್ನು ಕಳೆದುಕೊಂಡಂತಾಯಿತು. ನನ್ನ ಗುರುಗಳಾದ ಶಂಕರ ಮೊಕಾಶಿ ಪುಣೇಕರ ಅವರು ಮಾತ್ರ ನಿಷ್ಠಾವಂತ ಆಂಗ್ಲರಾಗಿದ್ದ ನನ್ನಂಥವರಿಗೆ ಮುಜುಗರವಾಗುವಂತೆ ನಮ್ಮ ಎಂ. ಎ. ಇಂಗ್ಲಿಷ್ ತರಗತಿಗಳಲ್ಲಿ 'There are poetries' ಎಂದು ಹೇಳುತ್ತಿದ್ದರು.

ಇಷ್ಟೆಲ್ಲಾ ಯಾಕೆ ಹೇಳಬೇಕಾಯಿತೆಂದರೆ ಚೆನ್ನವೀರ ಕಣವಿಯವರ ಕಾವ್ಯವನ್ನು ಸ್ವೀಕರಿಸುವಲ್ಲಿ ನವ್ಯದ ತಲೆಮಾರಿನವರಿಗೆ ಆದ ಸ್ವಯಂಕೃತ ಕಷ್ಟಗಳು ನೆನಪಾದ್ದರಿಂದ. ಕನ್ನಡ ಕಾವ್ಯದ ಪ್ರಧಾನ ಧಾರೆಯಲ್ಲಿರುವ ಶ್ರೇಷ್ಠ ಕವಿಗಳಲ್ಲಿ ಅವರು ಪ್ರಮುಖರು ಎನ್ನುವ ಸರಳ ಸತ್ಯವನ್ನು ಹೇಳಲಾಗದೆ ಅವರಿಗಾಗಿ "ಸಮನ್ವಯ ಕವಿ" ಎನ್ನುವ ವಿಶಿಷ್ಟ(ಅಥವಾ ಪರಿಶಿಷ್ಟವೇ ಇರಬಹುದೆ?)ವಾದ ಪ್ರವರ್ಗವೊಂದನ್ನು

ಸೃಷ್ಟಿಸಲಾಯಿತು. ನವೋದಯ ಸಾಹಿತ್ಯಮಾರ್ಗವನ್ನು ಹಿಂಬಾಲಿಸಿ, ಗ್ಯಾರಂಟಿಯಾಗಿ ಆತ್ಮವಿನಾಶದ ಕಡೆಗೆ ಹೊರಟಿದ್ದ ಅವರು ನವ್ಯವೆನ್ನುವ ಮೋಕ್ಷದ ಮಾರ್ಗಕ್ಕೆ ಕಿರುಹಾದಿಯನ್ನು ಹುಡುಕಿಕೊಂಡಿದ್ದರಿಂದಾಗಿ ಅವರನ್ನು ಸಮನ್ವಯ ಕವಿಯೆಂದು ಸಹಿಸಿಕೊಳ್ಳಬಹುದು ಎನ್ನುವುದು ಈ ಧೋರಣೆಯ ಇಂಗಿತವಾಗಿತ್ತು. ಚೆನ್ನವೀರ ಕಣವಿಯವರ ವಿನಯದಿಂದಾಗಿ ನವೋದಯ ಕಾಲದಿಂದಲೂ ಅವರು ತಮ್ಮ ಸ್ವಂತಿಕೆಯನ್ನು ದೃಢವಾಗಿ ಉಳಿಸಿಕೊಂಡು ಬಂದಿದ್ದನ್ನು ಬಹಳ ಜನ ಗಮನಿಸಲಿಲ್ಲ. ಬಹುಶಃ ನವ್ಯದ ಕಾಲದಿಂದಲೇ ಸ್ವಂತಿಕೆಯೆಂದರೆ ವಿಕ್ಷಿಪ್ತನಾಗಿರುವುದು, ಒರಟನಾಗಿರುವುದು, uncompromising ತಾನು ಎಂದು ಸಾಬೀತು ಮಾಡಲಿಕ್ಕಾಗಿ ಸಾಧ್ಯವಿದ್ದರೆ ಅಸಭ್ಯವಾಗಿರುವುದು ಎನ್ನುವ ಕಲ್ಪನೆಗೆ ಸ್ವೀಕೃತಿ ದೊರೆಯಿತೆಂದು ಕಾಣುತ್ತದೆ. ಆದರೆ ಅಡಿಗರೊಬ್ಬರನ್ನು ಬಿಟ್ಟರೆ "ಸ್ವಂತಿಕೆ"ಯ ಬಹಳ ಜನರು ವ್ಯವಸ್ಥೆಯೊಂದಿಗೆ, ಸಂಸ್ಥೆಗಳೊಂದಿಗೆ ಮತ್ತು ಶ್ರೀಮಂತ ಜೀವನಶೈಲಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಬಹಳ ಸುಲಭವಾಯಿತು. ಬೇಂದ್ರೆಯವರ ಕಾವ್ಯಭೂಮಿ, ಕರ್ಮಭೂಮಿ ಎರಡೂ ಆಗಿದ್ದ ಧಾರವಾಡದಲ್ಲಿದ್ದುಕೊಂಡು ತಮ್ಮ ಸ್ವಂತಿಕೆಗೆ ಧಕ್ಕೆ ಬಾರದಂತೆ ವಿನಯವಂತ ಸಾಮಾಜಿಕರಾದ ಕಣವಿಯಂಥವರ ಸಾಂಸ್ಕೃತಿಕ ವ್ಯಕ್ತಿತ್ವ ಅನನ್ಯವಾದುದು. ಇದು ಕೇವಲ ವ್ಯಕ್ತಿತ್ವದ ಪ್ರಶ್ನೆಯಲ್ಲ. ಸೃಷ್ಟಿಶೀಲತೆಯ ನೈರ್ಮಲ್ಯ ಹಾಗೂ ಹದದ ಪ್ರಶ್ನೆಯೂ ಆಗಿದೆ.

ಕಣವಿಯವರ ಕಾವ್ಯಭಾಷೆಯ ಶುಚಿ, ಸ್ವಚ್ಛಂದ ಮತ್ತು ಸಹಜಗತಿ ಈ ಸ್ವಂತಿಕೆಯ ನಿದರ್ಶನವಾಗಿದೆ. ಹೇಳಬೇಕಾದದ್ದನ್ನು, ಆಡಬೇಕಾದದ್ದನ್ನು, ಕಾವ್ಯವಾಗಿಸುವ ಈ "ಸಾಜ" ಎನ್ನುವುದು ನಿಜವಾಗಿಯೂ ಅಪೂರ್ವವೆ. ಕಾವ್ಯದ ಭಾಷೆ ಹಾಗೂ ನುಡಿಗಟ್ಟಿನ ನಿರ್ಮಾಣದಲ್ಲಿ ಕನ್ನಡ ಕಾವ್ಯವು ನವೋದಯದ ಆರಂಭದ ಕಾಲದಿಂದ ಎದುರಿಸಿದ ಸಂಕ್ರಮಣ ಸ್ಥಿತಿಗಳನ್ನು ನೆನಪು ಮಾಡಿಕೊಂಡರೆ ಈ ಸಮಸ್ಯೆಯ ಗಹನತೆ ಅರ್ಥವಾಗುತ್ತದೆ. ನನಗೆ ತೋರುವಂತೆ ಯಾವ ಯುರೋಪಿನ ಭಾಷ ' ಲ್ಲೂ ಕಾವ್ಯವು ಇಂಥ ತೊಡಕುಗಳನ್ನು ಇಷ್ಟು ಕಡಿಮೆ ಅವಧಿಯಲ್ಲಿ ಎದುರಿಸಿಲ್ಲ. ಆದಿಪ್ರಾಸವನ್ನು ಬಿಡುವುದೇ ಸಂಪ್ರದಾಯವನ್ನು ಮುರಿಯುವ ಪ್ರಯೋಗಶೀಲತೆಯೆನ್ನುವಂತೆ ಚರ್ಚೆಯಾದ ಕಾಲದಿಂದ ನವ್ಯೋತ್ತರದ ಮುಕ್ತ ಪ್ರಯೋಗಗಳ ಕಾಲದ ಮಧ್ಯದ ಅವಧಿ ಬಹಳ ಕಡಿಮೆ. ಹೀಗಾಗಿ ಕನ್ನಡದ ಕವಿಗಳಿಗೆ ಏಕಕಾಲಕ್ಕೆ ಹಲವು ಬಗೆಯ ಕಾವ್ಯಭಾಷೆಗಳ ಜೊತೆಗೂ ಸೆಣಸುವ ಸವಾಲು ಸತತವಾಗಿ ಎದುರಾಗಿದೆ. ಬಹುಶಃ ಈ ಕಾರಣದಿಂದಾಗಿಯೇ ಸ್ವಂತಿಕೆ ಇರುವ ಕವಿಗಳು ತಾವು ಬರೆಯುತ್ತಿದ್ದಾಗ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾವ್ಯಶೈಲಿಯನ್ನು ಬಿಟ್ಟು ಬರೆಯುವುದು ಅವಶ್ಯವಾಗುತ್ತ ಬಂದಿದೆ. (ಉದಾಹರಣೆಗೆ ಸ್ವತಃ ಅಡಿಗರೇ ತಮ್ಮ ಕಾವ್ಯ ಶೈಲಿಯನ್ನು "ಭೂಮಿಗೀತ"ದ ಬಿಗುವಿನಿಂದ "ಕೂಪಮಂಡೂಕ"ದ ಕೊಂಚ relaxed ಆದ ಶೈಲಿಗೆ ಅನಂತರ "ಚಿಂತಾಮಣಿಯಲ್ಲಿ ಕಂಡ ಮುಖ"ದ ಇನ್ನೂ ಹೆಚ್ಚು ನಿರುಮ್ಮಳವಾದ ಶೈಲಿಗೆ ಪರಿವರ್ತಿಸಿಕೊಳ್ಳುವ

ಸಂದರ್ಭದಲ್ಲಿಯೇ ಲಂಕೇಶ್ ಅಡಿಗರ ಕಾವ್ಯಭಾಷೆಗಿಂತ ತೀರ ಭಿನ್ನವಾದ ಲಯ ಹಾಗೂ ಪದಕೋಶವುಳ್ಳ ನುಡಿಗಟ್ಟನ್ನು ಅನ್ವೇಷಿಸುತ್ತಿದ್ದರು. ಕೆ. ಎಸ್. ನರಸಿಂಹಸ್ವಾಮಿ, ಗಂಗಾಧರ ಚಿತ್ತಾಲ ಇವರೆಲ್ಲ ಕೂಡ ಒಂದು ಸಿದ್ಧಶೈಲಿಯ ಆಸರೆ ಪಡೆಯುವಂಥ ಸ್ಥಿತಿ ಕನ್ನಡ ಸಂದರ್ಭದಲ್ಲಿ ಇರಲಿಲ್ಲ.) ಇನ್ನು ಬೇಂದ್ರೆ ನಾಡಿನ ಕವಿಗಳಿಗಂತೂ ಕಾವ್ಯಭಾಷೆಯ ಸಮಸ್ಯೆ ಇನ್ನೂ ಜಟಿಲವಾಗಿತ್ತೆಂದು ಕಾಣುತ್ತದೆ. ಧಾರವಾಡದ ಪ್ರಾದೇಶಿಕ ಭಾಷೆಯ ಎಲ್ಲಾ ಸತ್ವವನ್ನು ಬೇಂದ್ರೆ ಯಾವ ಪರಿಯಲ್ಲಿ ಸೂರೆ ಹೊಡೆದುಬಿಟ್ಟಿದ್ದಾರೆಂದರೆ ಆ ನುಡಿಗಟ್ಟಿನಲ್ಲಿ ಸಹಜವಾಗಿ ಬರೆದರೂ ಅದು ಬೇಂದ್ರೆ ಕಾವ್ಯದ ಅನುಕರಣವಾಗಿ ಕಂಡುಬಿಡುತ್ತಿತ್ತು. ಹಾಗೆ ಮಾಡುವುದು ಬೇಡವೆಂದುಕೊಂಡರೆ "ಶಿಷ್ಟ ಸಾಹಿತ್ಯಿಕ" ನುಡಿಗಟ್ಟನ್ನು ಬಳಸಬೇಕಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಕಣವಿಯವರು ತಮ್ಮ ಮೆಲುದನಿಯ ಸಾವಧಾನದ ನಿರುದ್ವಿಗ್ನ ಚಿಂತನಪರತೆಗೆ ಸಹಜವಾದ ಕಾವ್ಯಭಾಷೆಯನ್ನು ನಿರ್ಮಿಸಿಕೊಂಡಿದ್ದು ಅವರ ಸ್ವಂತಿಕೆಯ ನಿದರ್ಶನವಾಗಿದೆ. ಇದನ್ನು urbane ಎಂದು ಕರೆಯಬಹುದು (ನಾಗರಿಕವೆನ್ನಬಹುದೆ?). ದನಿಯನ್ನು ಎತ್ತರಿಸದೇ ಭಾವ ಪ್ರದರ್ಶನದ ಪ್ರಯತ್ನಮಾಡದೆ ಓದುಗ ಅಥವಾ ಕೇಳುಗನಿಗೆ ತೆರೆದುಕೊಂಡು ಸಂವಾದಿಯಾಗುವ ಕಾವ್ಯಶೈಲಿ ಅವರದು. ಹದವಾದ ಲಯಗಾರಿಕೆ ಇದ್ದರೂ ಹಾಡುಗಳೆಂದೇ ಬರೆದ ಪದ್ಯಗಳನ್ನು ಬಿಟ್ಟರೆ ಉಳಿದವುಗಳಲ್ಲಿ ಮಾತಿನ ಗತಿಯನ್ನೇ ಅವರ ಕಾವ್ಯದ ಸಾಲುಗಳು ಅನುಸರಿಸುತ್ತವೆ. ಅವರ ಉತ್ತಮ ಪದ್ಯಗಳಂತೂ ಕಾವ್ಯವನ್ನು 'ಆಡುತ್ತಿರುವವನ' ಮಾತಿನ ಕಾಕು ಅವನ ಧೋರಣೆಯನ್ನು ಅಭಿವ್ಯಕ್ತಿಸುವ ದನಿಯ ಏರಿಳಿತಗಳು ಪದ್ಯದ ಒಟ್ಟು ಅರ್ಥದ ಅವಿಭಾಜ್ಯ ಅಂಗಗಳೇ ಆಗಿರುತ್ತವೆ. ಉದಾ:

> .... ಕದ
> ಮುಚ್ಚಿ ತೆರೆವಷ್ಟರಲಿ ಹದಗೊಳುವುದೇ ಜೀವ ?
> ನಮ್ಮ ಮಾತೇ ನಮಗೆ ಅಸ್ಪಷ್ಟ ; ಸಂವಹನ –
> ಕೆಲ್ಲಿದೆ ಹಾದಿ ?

ಛಂದಸ್ಸಿನ ನಿಯಮಿತ ಗತಿಯ ಬದಲಾಗಿ ಮಾತಿನ ಸಹಜಗತಿಯನ್ನೆ ಕಣವಿಯವರು ತಮ್ಮ ಪದ್ಯಗಳ ತಳಹದಿಯಾಗಿ ಬಳಸುತ್ತಾರೆ. ಇದಕ್ಕೆ ಹೊಂದಿಕೊಂಡೇ ಅಥವಾ ಇದರಿಂದಾಗಿಯೇ ಅವರ ಕಾವ್ಯದ ನುಡಿಗಟ್ಟು ಕೂಡ ನಾಗರಿಕ ಸಂಭಾಷಣೆಯ ಶಿಷ್ಟ ಭಾಷೆಯದಾಗಿರುತ್ತದೆ. ಈ ಕಾರಣದಿಂದಾಗಿಯೇ ನವೋದಯದ ಪ್ರಭಾವದಲ್ಲಿ ಹಳೆಗನ್ನಡ ನಡುಗನ್ನಡದ ಭಾಷಾ ಪ್ರಯೋಗಗಳನ್ನು ಕಣವಿಯವರು ಬಳಸುತ್ತಿದ್ದ ಅವರ ಕಾವ್ಯ ಜೀವನದ ಶುರುವಾತಿನ ಘಟ್ಟವನ್ನು ಬಿಟ್ಟರೆ ಅನಂತರದ ಹಲವಾರು ದಶಕಗಳ ಅವರ ಕಾವ್ಯ ಭಾಷೆ ಮತ್ತು ನುಡಿಗಟ್ಟಿನ ದೃಷ್ಟಿಯಿಂದ ಸಮಕಾಲೀನವಾಗೇ ಉಳಿದಿದೆ. ಎಷ್ಟೋ ಕಡೆಗೆ ಕನಿಷ್ಠ ಕಾವ್ಯತ್ವವುಳ್ಳ ಹೆಚ್ಚು ಗದ್ಯಗಂಧಿಯಾದ ನುಡಿಗಟ್ಟನ್ನು ಅವರು ಬಳಸುವ ರಿಸ್ಕ್ ತೆಗೆದು

ಕೊಳ್ಳುತ್ತಾರೆಯೇ ಹೊರತು ಕಾವ್ಯಾತ್ಮಕವಾದ "ಶೈಲಿಯನ್ನು" ಬೇಕಂತಲೆ ಬಳಸಲು ಪ್ರಯತ್ನಿಸುವುದಿಲ್ಲ. ಈ ಬಗೆಯ ಕಾವ್ಯಶೈಲಿ ಸುಲಭವಾಗಿ ಸಿಕ್ಕುವಂಥದ್ದಲ್ಲ. ಶ್ರೇಷ್ಠ ಅಭಿರುಚಿ ಮತ್ತು ಸಂಯಮದಿಂದ ಅದನ್ನು ಸಂಪಾದಿಸಬಹುದು. ಅದನ್ನು ಸಾಧಿಸಿದ್ದು ಮಾತ್ರವಲ್ಲ ಅದರ ಶುಚಿಯನ್ನು ಇಷ್ಟು ದಶಕಗಳವರೆಗೆ ಕಣವಿಯವರು ಕಾಪಾಡಿಕೊಂಡು ಬಂದಿದ್ದಾರೆ. ನವ್ಯದ ಪ್ರಭಾವದಲ್ಲಿ ಕಣವಿಯವರ ಕಾವ್ಯದ ಭಾಷೆ ಎಲ್ಲಾ ಮೂಲಗಳಿಂದ ಹಾಗೂ ಸ್ತರಗಳಿಂದ ಬಂದ ಪದಗಳನ್ನೂ ಹಾಗೂ ಪ್ರಯೋಗಗಳನ್ನೂ ಬಳಸಿಕೊಳ್ಳತೊಡಗಿತ್ತು, ವಿಶೇಷವಾಗಿ ವ್ಯಂಗ್ಯಾತ್ಮಕವಾದ ಪದ್ಯಗಳಲ್ಲಿ.

ಕಾವ್ಯಭಾಷೆಯ ಬಗ್ಗೆ ಇನ್ನೊಂದು ಮಾತನ್ನು ಇಲ್ಲಿಯೇ ಪ್ರಸ್ತಾಪ ಮಾಡಬಹುದಾಗಿದೆ. ಒಂದು ಕಾವ್ಯಶೈಲಿಯನ್ನೇ ಅಥವಾ ಅಭಿವ್ಯಕ್ತಿ ಕ್ರಮವನ್ನೇ ನಿರ್ಮಿಸುವ ಬೇಂದ್ರೆ, ಅಡಿಗರಂಥ ಶಕ್ತಿ ಕಣವಿಯವರ ಕಾವ್ಯಕ್ಕಿಲ್ಲ. ಬದಲಾಗಿ ಹೊಸ ಶೈಲಿ ಮತ್ತು ಕ್ರಮಗಳಿಗೆ ಉತ್ಸಾಹದಿಂದ ಸ್ಪಂದಿಸುವ ಗುಣ ಅದಕ್ಕಿದೆ. ಇದು ಅನುಕರಣೆಯ ವಿಷಯವಲ್ಲ. ಒಬ್ಬ ಶಕ್ತಿಶಾಲಿ ಕವಿಯ ಅಭಿವ್ಯಕ್ತಿ ಕ್ರಮದ ಹಾದಿಯಲ್ಲಿ ನಡೆದು ಯಾವ ಅನುಭವವನ್ನು ವ್ಯಕ್ತಪಡಿಸಬಹುದೆನ್ನುವುದನ್ನು ಹುಡುಕುವ ಕ್ರಮವಾಗಿದೆ.

ಇದೇ ರೀತಿ ಕಣವಿಯವರು ಜಾನಪದ ಹಾಡುಗಳ ಮಟ್ಟುಗಳನ್ನು, ಬಂಡಾಯ ಕಾವ್ಯದ ವಿಡಂಬನಾತ್ಮಕ ಧ್ವನಿಯನ್ನು ಅನುಸರಿಸಿಕೊಂಡು ಕಾವ್ಯ ರಚಿಸಬಲ್ಲರು. ಕೆಲವು ಕಡೆಗೆ ಮಾತ್ರ ಬೇಂದ್ರೆ ಮತ್ತು ಅಡಿಗರ ಬಹಳ ದಟ್ಟವಾದ ನೆರಳು ಕಂಡುಬರುತ್ತದೆ. ಆದರೆ ಕಣವಿಯರು ತಮ್ಮ ವ್ಯಕ್ತಿತ್ವದ ಸಹಜ ಧ್ವನಿಯನ್ನೇ ನೆಚ್ಚಿಕೊಂಡು ಬರೆದ ಕಾವ್ಯದಲ್ಲಿ ಈ ತೊಂದರೆ ಕಂಡುಬರುವುದಿಲ್ಲ. ಕಣವಿಯರ ಕಾವ್ಯಭಾಷೆಯ adaptabilityಯಿಂದಾಗಿ ಅವರು ತಮ್ಮದೇ ವಿಶಿಷ್ಟವಾದ ಸಾಂದರ್ಭಿಕ ಕಾವ್ಯದ ಕ್ರಮವೊಂದನ್ನು ನಿರ್ಮಿಸಿಕೊಳ್ಳುವುದು ಸಾಧ್ಯವಾಯಿತು. ಬಹುಶಃ ಕನ್ನಡದ ಪ್ರಧಾನ ಕವಿಗಳಲ್ಲಿ ಕಣವಿಯವರಷ್ಟು ಸಾಂದರ್ಭಿಕ ಕವಿತೆಗಳನ್ನು ಬರೆದವರು ಯಾರೂ ಇಲ್ಲ. ಅವರು ತಮ್ಮ ಕಾವ್ಯವ್ಯಕ್ತಿತ್ವವನ್ನು ಗುರುತಿಸಿಕೊಳ್ಳುವುದೂ ಒಬ್ಬ ಸಾಂದರ್ಭಿಕ ಕವಿಯ ಮಾದರಿಯಲ್ಲಿಯೇ ಎಂದು ತೋರುತ್ತದೆ. ರಮ್ಯ ಕಾವ್ಯದ ಸಂಪ್ರದಾಯದಲ್ಲಿ ಬರುವ Lyric poet ನ ಕಾವ್ಯವ್ಯಕ್ತಿತ್ವಕ್ಕಿಂತ ಭಿನ್ನವಾದದ್ದಿದು. ಈ ಮಾದರಿಯಲ್ಲಿ ಅಂತರ್ಮುಖಿಯಾಗಿದ್ದುಕೊಂಡು ಎಲ್ಲಾ ಭಾವ ಸನ್ನಿವೇಶಗಳಿಗೆ ಭಾವಗೀತೆ ಬರೆಯುವುದರ ಮೂಲಕ ಪ್ರತಿಸ್ಪಂದಿಸುವ ಬದಲಾಗಿ ಸಾರ್ವಜನಿಕ ವೆನ್ನಬಹುದಾದ ವ್ಯಕ್ತಿ ಮತ್ತು ಸನ್ನಿವೇಶಗಳಿಗೆ ಕಾವ್ಯದ ಮೂಲಕ ಪ್ರತಿಕ್ರಿಯಿಸುವ ಕಾವ್ಯವ್ಯಕ್ತಿತ್ವವಿದೆ. ತಾನು ಸಮುದಾಯದ ಸಾಂಸ್ಕೃತಿಕ ವಕ್ತಾರನೆಂದುಕೊಳ್ಳುವ ಈ ಕವಿ ಅಂತರಂಗದ ಸೂಕ್ಷ್ಮಗಳಿಗೆ ಸ್ಪಂದಿಸುವ ಹಾಗೆಯೇ ಸಾರ್ವಜನಿಕ ಘಟನೆಗಳಿಗೂ ಕಾವ್ಯ ಮೊದಲಿನಿಂದಲೂ ತನ್ನದೇ ಆದ ಸಮೃದ್ಧವಾದ ಸಮುದಾಯವನ್ನು, ಸಾಂಸ್ಕೃತಿಕ

ಜೀವನವನ್ನು ನಿರ್ಮಿಸಿಕೊಂಡು ಬಂದಿದೆ. ಇದು ಕವಿ ಕಣವಿಯವರ ಖಾಸಗಿ – ಸಾರ್ವಜನಿಕ ಪ್ರಪಂಚ. ಇದು ಅವರ ಕಾವ್ಯದ ಸೆಲೆಯಾದ ಅನುಭವ ವಿಶ್ವ. ಇದರಲ್ಲಿ ಅವರ ಕುಟುಂಬ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಕನ್ನಡ ಮತ್ತು ಸಾಂಸ್ಕೃತಿಕ ಜಗತ್ತು ಇವೆಲ್ಲವೂ ಸೇರಿಕೊಂಡಿವೆ. ಆದ್ದರಿಂದಲೇ ಅವರ ಮಕ್ಕಳು, ಸಹೋದ್ಯೋಗಿಗಳು ಅವ

ನಿಜದ ನೇರಕೆ ಕರೆವ ನನೆಬಾಗು ಮೂಗುತೆನೆ
(ಬುದ್ಧೋದಯ)

ಯಾವುದೋ ಅಮೃತಗಳಿಗೆ, ನಿಮ್ಮ ದೃಷ್ಟಿಗೆ ಬಿತ್ತು
ಹೂತಿಟ್ಟ ಹೊನ್ನಗಣಿ : ತೋಡಿದಿರಿ ಹಗಲಿರುಳು
ಮೈಮರೆತು : ಹೊರತೆಗೆದು ಹೇರಿದಿರಿ ಬಂಡಿ ಬಂಡಿ
ಚಿನ್ನದ ಅದಿರು :
....
ತಾಳೆಗರಿ ಗರಿಯೊಡೆದು ಮರವೇರಿ ಕುಕಿಲಿ
ಬೆಳಕನೆಚ್ಚರಿಸಿದವು.....
.... ನಿಮಗೋ ಶೂನ್ಯ – ಸಂಪಾದನೆ.
ರುಮಾಲದ ಕಟ್ಟು ಬಿಚ್ಚಿಲ್ಲ, ತೆಗೆದಿಲ್ಲ ಇಟ್ಟ ಕನ್ನಡಕ.
(ದಿ. ಹಳಕಟ್ಟಿಯವರು)

ಮಣಿದು ಬದುಕದ, ಇದ್ದುದಿನಿದಾಗಿಸುವ ಜೀವಹದ
(ದ. ಬಾ. ಕು. ಸ್ಮೃತಿ)
ಹುಟ್ಟುಸಾವಿನ ನಡುವೆ ಕವನ ಕಟ್ಟಿದೆ ಬದುಕು
(ಗಡಿಯಲ್ಲಿ ಮಡಿದ ಯೋಧರು)
ಜಗದಂಬೆ – ಹಡಲಿಗೆ ಹೊತ್ತು ಕುಣಿವಗೆಲ್ಲಿ ಪುರಸತ್ತು ?
ಹಣ್ಣಾದ ಕೇದಿಗೆಯ ಹೊಡೆ : ಚೂಪಾದ ಗರಿ ; ಹುಷಾರಿ
ಕಂಪಿಗೆಲಿಯ ಕೊರತೆ ? ನಡೆದದ್ದೆ ಸಾಧನಕೇರಿ, ನುಡಿದದ್ದೆ
ಕವಿತೆ.
(ಎಪತ್ತರ ಬೇಂದ್ರೆ)

ಕಲ್ಪವೃಕ್ಷದೆಳನೀರು, ಬಾಗಿರುವ ಗೊನೆಬಾಳೆ,
ವಸಂತದ ಚಂದನ ಗಂಧ, ಒಲುಮೆ ಹೂಮಾಲೆ
(ತೀ. ನಂ. ಶ್ರೀಯವರ ಪಯಣ)

ಇಲ್ಲಿ ಬರುವ ರೂಪಕಗಳನ್ನೆ ಕಣವಿಯವರ ಅಸಲು ತಾತ್ವಿಕ ಭಾಷೆಯೆಂದು ಕೊಂಡರೆ ಅವುಗಳ ಮೂಲಕ ಹೊಮ್ಮುವ ಜೀವನದೃಷ್ಟಿ ಆದರ್ಶಪರವಾದರೂ ಭಾವುಕತೆ ಅಥವಾ ಸ್ವಪ್ರದರ್ಶನವಿಲ್ಲದೇ ಸಾಮಾನ್ಯ ಬದುಕಿನಲ್ಲಿ, ನಿತ್ಯದ ಹೋರೆಗಳಲ್ಲಿಯೆ ಸಫಲತೆಯನ್ನು, ಕೃತಾರ್ಥತೆಯನ್ನು ಕಾಣುವ ಬಗೆಯದು.

ಕಣವಿ ತಮ್ಮ ಸುನೀತಗಳ ವಸ್ತುಗಳಾಗಿರುವ ವ್ಯಕ್ತಿಗಳನ್ನು ಧೀರೋದಾತ್ತರೆಂದು ಅಥವಾ ಸಾಂಸ್ಕೃತಿಕ ನಾಯಕರೆಂದು ಹೊಗಳಿದ್ದು ಬಹಳ ಕಡಿಮೆ. ಕೆಲವರನ್ನು ಬಿಟ್ಟರೆ ಸಂತರ ಸಂಖ್ಯೆಯೂ ಕಡಿಮೆಯೆ. ಅಥವಾ ನಾಯಕ – ಸಂತ ಆಗಿದ್ದ ವ್ಯಕ್ತಿಯನ್ನು ಕಣವಿಯವರು ಮಾಗುವಿಕೆ, ಸಹಜ ಬೆಳವಣಿಗೆ, ನಿಸರ್ಗಸಮಾನವಾದ ಸಮತೋಲನ ಇವುಗಳನ್ನು ಸೂಚಿಸುವ ರೂಪಕಗಳ ಮೂಲಕವೇ ಗ್ರಹಿಸುವುದರಿಂದ ಅಸಾಮಾನ್ಯತೆಯನ್ನು ಸಾಮಾನ್ಯದ ಗತಿಗೆ ಒಗ್ಗಿಸುತ್ತಾರೆಂದು ಹೇಳಬಹುದು. ಕಣವಿಯವರ ಕಾವ್ಯದಲ್ಲಿ ನಿತ್ಯದ ಬದುಕಿನ ನಿಧಾನ ಲಯಗಳನ್ನು ಹಠಾತ್ತನೆ ಮೀರಿ ನಿಲ್ಲುವ ಅಸಾಮಾನ್ಯ ಶಕ್ತಿಗಳ ಬಗ್ಗೆ ಹೆಚ್ಚಿನ ಆದರವಿಲ್ಲ. ಆದರೆ ವಿಡಂಬನಾತ್ಮಕ ಪದ್ಯಗಳಲ್ಲಿ ಧಿಡೀರ್ ನಾಯಕರುಗಳ ಬಗ್ಗೆ ನಿರ್ದಯವಾದ ವಿಮರ್ಶೆಯಿದೆ. ಸಮಕಾಲೀನ ರಾಜಕೀಯ ವ್ಯಕ್ತಿಗಳ ಒಂದು "rogues gallery" ಯನ್ನು ಕಣವಿಯವರ ವಿಡಂಬನಾತ್ಮಕ ಪದ್ಯಗಳಲ್ಲಿ ಕಾಣಬಹುದು. ಕಣವಿಯವರು ಶ್ರೇಷ್ಠ ವಿಡಂಬನಾತ್ಮಕ ಕವಿಗಳು ಎನ್ನುವುದು ಆಶ್ಚರ್ಯವೆನಿಸಿದರೂ ನಿಜ. ನಿತ್ಯದ ಜೀವನದ ಆ ಸಹಜ ಸಾರ್ಥಕತೆಗೆ ನಿಕಷವಾಗಿ ಅವರು ದೀಢೀರೆಂದು ಉದ್ಭವವಾಗುವ ವಿಕೃತಿಗಳನ್ನು ಗುರುತಿಸುತ್ತಾರೆ.

ವ್ಯಕ್ತಿಚಿತ್ರಗಳುಳ್ಳ ಕಣವಿಯವರ ಸುನೀತಗಳು ಜೀವನದ ಬಗ್ಗೆ ಅವರು ಬರೆದಿಟ್ಟುಕೊಂಡ ಮೆಲುದನಿಯ manifestoದ ಹಾಗೆ ಕಾಣುತ್ತವೆ. ತಾವು ಬಯಸುವ ಮೌಲ್ಯಗಳನ್ನು, ಜೀವನ ಕ್ರಮವನ್ನು ಅವರು ಈ ವ್ಯಕ್ತಿಗಳಿಗೆ ಆರೋಪಿಸಿ ಅವರ ಮೂಲಕ ಜೀವನದ ಆರೋಗ್ಯವಂತಿಕೆಯ ಬಗೆಗಿನ ತಮ್ಮ ಶ್ರದ್ಧೆಗಳನ್ನು ಗಟ್ಟಿಗೊಳಿಸಿಕೊಳ್ಳುತ್ತಾರೆ. 'ಕರಿಕಿ– ಕಣಗಿಲ' ಪದ್ಯ ಕವಿ ಡಿ. ಎಸ್. ಕರ್ಕಿಯವರ ಬಗೆಗಿದೆಯಾದರೂ ಇಡೀ ಸುನೀತವೇ ಕಣವಿಯವರು ನಂಬುವ ಜೀವನ ಮೌಲ್ಯಗಳ ರೂಪಕಾತ್ಮಕ ವಿವರಣೆಯಾಗಿದೆ.

.... ಎಲ್ಲರಿಗು ನಿಲುಕುವ ಹಾಗೆ ಒಳ –
ಹೊರಗೆ ತುಂತುಂಬಿ ಬರುವ ನಾದದ ತುಳುಕು. ಹದಿ–
ನೆಂಟು ಒಣ ಉಸಾಬರಿ ಇರದ ಮಾತು – ಮೈತ್ರಿಯ
ನಂಟು : ಗೆಂಟು ಗೆಂಟಿಗೆ ಒಡೆದ ನಾಲ್ಕಾರು ಎಲೆ –
ಚಿಗುರು: ನಿರಾಡಂಬರ ಟೊಂಗೆ. ಹೊಂಗೆಯ ಹಾಗೆ
ಹೂಂ ಎಂದು ಹೂ ಸುರಿದು ನೆಲವ ಮುಚ್ಚುವುದಿಲ್ಲ.
ಕೆಳಗೆ ಕರಿಕಿ – ಪತ್ರಿಯ ಮೇಲೆ ಉದುರಿದ ಹೂವ
ಬೆರಳಿಂದೆತ್ತಿ ಮೂಸು : ಬೇಕಿಲ್ಲ ಹಾವ – ಭಾವ.

ಈ ವ್ಯಕ್ತಿಚಿತ್ರಗಳ ಮೂಲಕ ಕಣವಿಯವರು ಕನ್ನಡ ಸಂಸ್ಕೃತಿ ಪರಂಪರೆಯೊಂದಿಗೆ ತಮ್ಮ ಸಂಬಂಧಗಳನ್ನು ಕುದುರಿಸಿಕೊಳ್ಳುತ್ತಾರೆ. ಇದು ಒಂದು ಕಾಲಮಾನಕ್ಕೆ ನಿಂತುಹೋದ ಪ್ರಕ್ರಿಯೆಯಲ್ಲ. ಇತ್ತೀಚಿನ ಪದ್ಯಗಳಲ್ಲಿ ಸಾಲುಮರದ ತಿಮ್ಮಕ್ಕ, ಶಂಕರ ಮೊಖಾಶಿ ಪುಣೇಕರ ಇವರೆಲ್ಲ ಸೇರಿಕೊಂಡಿದ್ದಾರೆ. ಇವುಗಳಲ್ಲಿ

ವಿಶಿಷ್ಟವಾದದ್ದು 'ನೇಣು ನುಡಿದದ್ದು' ಎನ್ನುವ ಸುನೀತ. ಈ ಪದ್ಯ ಆಫ್ರಿಕಾದ ಕ್ರೂರ ಇತಿಹಾಸವನ್ನು ಅದ್ಭುತವಾಗಿ ಹಿಡಿದಿಟ್ಟಿದೆ.

ಇಲ್ಲ, ಈ ಕ್ರೂರ ಸರಕಾರಕ್ಕೆ ನಾನು ಹುರಿಗೊಂಡಿಲ್ಲ....
ನನ್ನ ಕತ್ತರಿಸಿ, ತಿಳಿಯದೆ ನಿಮಗೆ ? ಈ ಕೊರಳು ಬಿಗಿಯಲಾರೆ

ಹಾಗೆಯೇ 'ಅಗಲಿದ ಲೇಖಕ ಮಿತ್ರರನ್ನು ನೆನೆದು' ಎನ್ನುವ ಸುನೀತ, ಬರೆಯುವ, ಬದುಕುವ ಮತ್ತು ಸಾವಿನ ಅನಿರೀಕ್ಷಿತಕ್ಕೆ ಸಿದ್ಧವಾಗುವ ಬವಣೆಯ ಬಗ್ಗೆ ಬರೆದ ತೀವ್ರವಾದ ಪದ್ಯವಾಗಿದೆ :

ಜೀವನ ಪ್ರವಾಹಕ್ಕೆ ಯಾವ ಗತಿ? ಎಲ್ಲೊ ಜಲ –
ಪಾತ; ತಿರುಗಣಿ ಮಡುವನೊಡಹಾಯ್ದು ಎರಡು ದಡ
ಧಿಕ್ಕರಿಸಿ ಹರಿದು, ತಿರುಗಿ ಸಮ ಪಾತಾಳಿಯ ಕಂಡ
ದೈತ್ಯಶಕ್ತಿಗೆ ಕೊನೆಗು ನಿರ್ಲಕ್ಷ್ಯತೆಯ ಮೂಲ –
ವಾಗುವದೆಂಥ ವಿಪರೀತ! ಅರ್ಥಕೆ ಅಪಾರ್ಥ
ಹೀಗೆಯೇ ಹುಡುಕುತ್ತ, ತಡಕುತ್ತ, ಮಿಡುಕುತ್ತ.....

ಹಿರಿದಾದ ಅರ್ಥದಲ್ಲಿ ಈ ಪದ್ಯಗಳು ಕಣವಿಯವರ ಸಾರ್ವಜನಿಕ ವ್ಯಕ್ತಿತ್ವದ ಅಭಿವ್ಯಕ್ತಿಗಳೂ ಆಗಿವೆ. ನನಗೆ ತೋರುವಂತೆ ಈ ತರದ ಕಾವ್ಯವ್ಯಕ್ತಿತ್ವ ನವೋದಯ ಮತ್ತು ನವ್ಯ ಇವೆರಡರ ಪ್ರಧಾನ ಮಾದರಿಗಳಿಗಿಂತ ಭಿನ್ನವಾದದ್ದು. ಅಂದರೆ ಸಾರ್ವಜನಿಕ ಬದುಕಿಗೆ ತೆರೆದುಕೊಂಡಿದ್ದು ಅಲ್ಲಿ ಕಾಣುವ ಅಧಃಪತನದಿಂದ ನೋವುಂಡಿರುವಂಥದು. ಆದರೆ ವ್ಯಗ್ರತೆ ಮತ್ತು ಆಕ್ರೋಶಕ್ಕಿಂತ ಸಜ್ಜನನೊಬ್ಬನ ನಿಟ್ಟುಸಿರಿನ ಧಾಟಿಯನ್ನು ಒಪ್ಪಿಕೊಳ್ಳುವಂತಹದು. (ತುರ್ತುಪರಿಸ್ಥಿತಿಯ ಬಗ್ಗೆ ಅವರು ಬರೆದ ಪದ್ಯಗಳು ಆ ಸಂದರ್ಭದಲ್ಲಿ ಬಹಳ ಮುಖ್ಯವಾದವು.)

ಕಣವಿಯವರ ಕಾವ್ಯದ ಒಂದು ಬಹುದೊಡ್ಡ ವಸ್ತು ನಿಸರ್ಗವಾಗಿದೆ. ನವೋದಯದ ನಂತರ ನಿಸರ್ಗ ನಮ್ಮ ಕಾವ್ಯದಿಂದ ಯಾಕೆ ನಿಷ್ಕ್ರಮಣ ಮಾಡಿತೆನ್ನುವುದು ನಮ್ಮ ಸಾಂಸ್ಕೃತಿಕ ಅಧ್ಯಯನಗಳ ಪ್ರಮುಖ ವಿಷಯವಾಗಬೇಕಾಗಿದೆ. ಇಂಗ್ಲಿಷ್ ರೋಮ್ಯಾಂಟಿಕ್ ಕಾವ್ಯದ ಪ್ರಭಾವದಲ್ಲಿ ಕನ್ನಡ ನವೋದಯ ಕಾವ್ಯ ನಿಸರ್ಗವನ್ನೇ ತನ್ನ ಪ್ರಧಾನವಸ್ತುವಾಗಿ ಸ್ವೀಕರಿಸಿತು ಎಂದು ಹೇಳಿದರೆ ಹೆಚ್ಚಿನದೇನನನ್ನೂ ಹೇಳಿದಂತಾಗುವುದಿಲ್ಲ. ಅದೇನೇ ಇರಲಿ, ಕಣವಿಯವರ ಕಾವ್ಯದಲ್ಲಿ ಸ್ಥಾಯಿಯಾಗಿ ಉಳಿದು ಬಂದಿರುವುದು ನಿಸರ್ಗ. ಕುವೆಂಪು ಮತ್ತು ಬೇಂದ್ರೆ ನಿಸರ್ಗ ಕಾವ್ಯಗಳ ಮಾದರಿಗಳಿಗಿಂತ ಭಿನ್ನವಾದ ಮಾದರಿ ಕಣವಿಯವರದೇ ಎಂದು ನನ್ನ ಭಾವನೆ. ಆಳವಾದ ಚಿಂತನಶೀಲತೆಯ ಮೂಲಕ ನಿಸರ್ಗದ ಸತತ ವ್ಯಾಪಾರಗಳನ್ನು ಗಮನಿಸುವುದು ಮಾತ್ರವಲ್ಲ, ಧ್ಯಾನಸ್ಥವೆನ್ನಬಹುದಾದ ಮನೋಸ್ಥಿತಿಯಿಂದ ಆ ಜಗತ್ತಿನೊಂದಿಗೆ ತಾದಾತ್ಮ್ಯದ ಅನುಭವವನ್ನು ಹೊಂದುವುದೂ ಈ ಮಾದರಿಯಲ್ಲಿ ಮುಖ್ಯವಾಗಿದೆ. ಕಣವಿಯವರ ಕಾವ್ಯ ನಿಸರ್ಗದ

'ಆಸ್ವಾದನೆ'ಯನ್ನು ವರ್ಣಿಸುವ ಕಾವ್ಯವಲ್ಲ. ಅವರ ಜೀವನಾನುಭವದ ಅತ್ಯಂತ ಆಳವಾದ ಕೇಂದ್ರವೊಂದು ಸದಾ ನಿಸರ್ಗದೊಂದಿಗೆ ಸಂವಾದದಲ್ಲಿ ತೊಡಗಿರುತ್ತದೆ. ಒಂದು ಕಡೆ ಅದು ಅವರ ಸಮೃದ್ಧವಾದ ರೂಪಕ ಸೃಷ್ಟಿಯ ಸೆಲೆಯಾಗಿ ಕೆಲಸಮಾಡಿದರೆ ಇನ್ನೊಂದು ಕಡೆಗೆ ಮನುಷ್ಯ ಜೀವನ ಹಾಗೂ ನಾಗರಿಕತೆಗಳನ್ನು ಬೆಲೆಗಟ್ಟಲು ಒಂದು ನೆಲೆಗಟ್ಟನ್ನು ಒದಗಿಸಿಕೊಡುತ್ತದೆ.

ಕಣವಿಯವರ ವಿಶಿಷ್ಟವಾದ ಕಾಣ್ಕೆ 'ನೆಲ– ಮುಗಿಲು'ವಿನಂಥ ಸುನೀತಗಳಲ್ಲಿ ಬಹಳ ಖಚಿತವಾಗಿ ವ್ಯಕ್ತವಾಗಿದೆ.

> ಕಣ ಕಣದ ಗತಿ – ಮತಿಯ ಗುರುತಿಸು, ಆದರೀಗಲೆ ಅದರ
> ಇತಿವೃತ್ತವನು ಬರೆಯದಿರು, ನೀನಾಗಿ ಕೊರೆಯದಿರು
> ದಾರಿಯನು, ಬಯಲ ಬಿಡುಗಡೆ ನುಂಗಿ ನೀರು ಹಿಡಿಯಲಿ,
> ವಿಶ್ವವೆಲ್ಲವು ತೆರೆದ ಬಾಗಿಲೆ... .... ಹರಗು
> ಒಳಹೊರಗು ಸಿದ್ಧವಿರು. ಹೊಸ ನೀರು ನಿಬ್ಬೆರಗು.

ಬೇಂದ್ರೆಯವರ ಹಾಗೆ ಕಣವಿಯವರು ಕೂಡ ನಿಸರ್ಗದಲ್ಲೇ ಮನುಷ್ಯ ಲೋಕವನ್ನು ಪೊರೆಯಬಲ್ಲ ಎಲ್ಲಾ ಮೌಲ್ಯಗಳ ಒಡಲನ್ನು ಕಾಣುತ್ತಾರೆ. ಅದಕ್ಕೆ ಮಿಡಿಯುವ ಅಂತಃಕರಣವಿದ್ದರೆ ಸಾಕು. ಬೇಂದ್ರೆಯವರಿಗೆ "ಹೂತ ಹುಣಸೀ ಮರ"ವೇ ಸಾಕು ಎನ್ನಿಸಿದಂತೆ, ಕಣವಿಯವರಿಗೂ ಕೂಡ ಬೇಲಿ ಮೇಲಿನ ನೀಲಿ ಹೂಗಳು, ಧಾರವಾಡದ ಮಳೆ, ಋತುಮಾನಗಳು ಇವುಗಳಲ್ಲಿಯೇ ಸೃಷ್ಟಿಯ ಅದ್ಭುತ ಪ್ರಪಂಚ ಗೋಚರವಾಗಬಲ್ಲದು. ನಿಸರ್ಗ ಕುರಿತ ಸುನೀತಗಳಲ್ಲಿ ಕಣವಿಯವರ ರೂಪಕಪ್ರತಿಭೆ ಅನನ್ಯವಾದ ಪ್ರತಿಭೆಯನ್ನು ತೋರಿಸುತ್ತದೆ. ಗ್ರಾಂಥಿಕ ನುಡಿಗಟ್ಟಿಗೂ ಅಲ್ಲಲ್ಲಿ ಧಾರವಾಡದ ವಿಶಿಷ್ಟ ಭಾಷಾಪ್ರಯೋಗಗಳ ಹೊಳಪನ್ನು ಕೊಡುತ್ತ, ತೀರಾ ಅನಿರೀಕ್ಷಿತವೆನಿಸದಿದ್ದರೂ ಹೊಸದಾಗಿ ಕಾಣುವ ರೂಪಕಗಳನ್ನು ಸಮೃದ್ಧವಾಗಿ ಸೃಷ್ಟಿಸುತ್ತಾ ಕಣವಿಯವರು ನಿಸರ್ಗದ ಬಗ್ಗೆ ತಮ್ಮ ಚಿರಂತನ ದಾಹವನ್ನು ಅಭಿವ್ಯಕ್ತಿಸುತ್ತಾರೆ. ಧಾರವಾಡದ ಆಕಾಶ, ನೆಲ, ಮೋಡ, ಶ್ರಾವಣ, ಆಷಾಢಗಳೆಲ್ಲವೂ ಕಣವಿಯವರ ಸೃಜನಶೀಲ ವಿಶ್ವದಲ್ಲಿ (cosmos) ತಮ್ಮ ನೆಲೆಗಳನ್ನು ಪಡೆದಿವೆ. ಆದ್ದರಿಂದಲೇ ನಿಸರ್ಗ ಅವರಿಗೆ ಪರಿಚಿತ ತಾಣ. ಅದರ ಜತೆಗಿನ ಅವರ ಸಂಬಂಧದಲ್ಲಿ ಯಾವ ಅನಿಶ್ಚಿತತೆ ಇಲ್ಲ. ಕಣವಿಯವರ ಕೆಲವು ನಿಸರ್ಗ ಕವನಗಳು ಮನುಷ್ಯನ ಜಗತ್ತಿನ ತಲ್ಲಣಗಳಿಂದ ಅಬಾಧಿತವಾಗಿ ಕಂಡುಬಂದರೂ ಅವರ ಪ್ರಧಾನ ಕವನಗಳಲ್ಲಿ ನಿಸರ್ಗ ಮತ್ತು ನಾಗರೀಕತೆಯ ಇಕ್ಕೆಲಗಳನ್ನು ಗಮನಿಸುವ ಸಮತೋಲನದ ದೃಷ್ಟಿ ಇದೆ. ಋತುಸಂಹಾರವೊಂದರ ಶೈಲಿಯಲ್ಲಿ ಎಲ್ಲಾ ಮಾಸಗಳನ್ನು ಆಧಾರವಾಗಿಟ್ಟುಕೊಂಡು ಬರೆದಿರುವ ಪದ್ಯಗಳು ಒಟ್ಟು ರಚನೆಯಲ್ಲಿ ಸಂಗೀತದ ರಾಗಮಾಲಿಕೆಯನ್ನು ಹೋಲುತ್ತವೆ. ಋತುಮಾನಕ್ಕೆ ತಕ್ಕ ಹಾಗೆ ನಿಸರ್ಗದಲ್ಲಾಗುವ ಸೂಕ್ಷ್ಮ ಪರಿವರ್ತನೆಗಳನ್ನು ಅದರಿಂದುಂಟಾಗುವ moods ಗಳನ್ನು ಇಷ್ಟು ಪ್ರಭಾವ ಶಾಲಿಯಾಗಿ ಹಿಡಿದಿಟ್ಟಿರುವ ಕವನಗಳು ವಿರಳ. ಜೊತೆಗೆ ಈ ಸುನೀತಗಳ ಎರಡನೇ

(ಅಂದರೆ ಇಂಗ್ಲಿಷ್ ಸುನೀತದ ಪರಿಭಾಷೆಯಲ್ಲಿ sestet) ಭಾಗದಲ್ಲಿ ಮನುಷ್ಯ ಪ್ರಪಂಚದ ಬಗ್ಗೆ ಗಂಭೀರವಾದ ಚಿಂತನೆಯಿದೆ. 'ಆಷಾಢ'ದಲ್ಲಿ ನೆರೆಹಾವಳಿ ಭಾವದಲಿ ಬಾಲ್ಯವನ್ನು ತುಂಬುವ ಆಕ್ರಮಣಗಳಿದ್ದರೆ 'ಶ್ರಾವಣ'ದಲ್ಲಿ

ವ್ರತ, ನಿಯಮ, ಇಷ್ಟ – ಕುಲ ಗ್ರಾಮ ದೈವತ ಪೂಜೆ
ಮುಗಿಯಿತೆ ? ಈ ಸಮಷ್ಟಿಗೆ ಸೃಷ್ಟಿ ನೀಡಿರುವ ಕೊಡುಗೆ ?

ಎನ್ನುವ ಪ್ರಶ್ನೆ ಇದೆ. 'ಭಾದ್ರಪದ'ದಲ್ಲಿ

ನೂರು ದುರಂತಗಳ ನೋವಿನ ನಡುವೆ ಮಂಗಲ
ಮೂರ್ತಿ ಕಂಗೊಳಿಸಿ – ಜನಮನದ ಆವಿಷ್ಕಾರ.

ಎನ್ನುವ ಭರವಸೆ ಇದೆ. ಆದರೆ 'ಆಶ್ವಿನ'ದಲ್ಲಿ

ಅಣ್ವಸ್ತ್ರ ಪೈಪೋಟಿ – ಸದ್ಯದ ವರ್ತಮಾನ.

ನೆರೆ – ಹೊರೆ, ಇದ್ದದ್ದೆ ನಿತ್ಯ ಸೀಮೋಲ್ಲಂಘನ.

....

ಎಲ್ಲೆಡೆಗು ಸೋಲನೊಪ್ಪದ ನರಕಾಸುರರು

ಎನ್ನುವ ಆತಂಕವಿದೆ. ಈ ಎಲ್ಲಾ ಪದ್ಯಗಳನ್ನು ಒಟ್ಟಿಗೆ ಓದಿದರೆ ಬದುಕಿನ ವಿವಿಧ ಲಯಗಳ ಏರಿಳಿತದಲ್ಲಿ ಎಲ್ಲವೂ ಹದವಾಗುವ ಬಗೆಗಿರುವ ಕವಿಯ ಶ್ರದ್ಧೆ ಶ್ರೇಷ್ಠ ಕಲೆಗಾರಿಕೆಯ ನೇಯ್ಗೆಯೊಳಗಿಂದ ಹೊಮ್ಮಿ ಬರುತ್ತದೆ. ಛಂದಸ್ಸು ಮತ್ತು ಬಂಧದ ದೃಷ್ಟಿಯಿಂದ ಇವು ಕನ್ನಡದ ಅತ್ಯುತ್ತಮ ಸುನೀತಗಳೂ ಹೌದು. ಬೇಂದ್ರೆಯವರ 'ಉಯ್ಯಾಲೆ'ಯ ಸುನೀತಗಳ ಸಂಕೀರ್ಣ ರೂಪಕಸೃಷ್ಟಿ, ವೈಚಾರಿಕ ರಭಸ ಕಣವಿಯವರ ಈ ಸುನೀತಗಳಲ್ಲಿ ಕಂಡುಬರದಿದ್ದರೂ ತಮ್ಮದೇ ರೀತಿಯ ಅನನ್ಯ ಪರಿಪೂರ್ಣತೆಯನ್ನು ಅವು ಸಾಧಿಸಿವೆ.

'ಯುಗಾದಿ ೧೯೮೮' ಕಣವಿಯವರ ಚಿಂತನಶೀಲತೆಯ ಸಾಮಾಜಿಕ ಬದುಕಿನ ವಿಕೃತಿಗಳಿಗೆ ನೋವುಪಡುವ ಗಂಭೀರ ಸ್ಪಂದನೆಯ ಉತ್ತಮ ಅಭಿವ್ಯಕ್ತಿಯಾಗಿದೆ.

..... ತುತ್ತ ತುದಿಗೆ ಕುಳಿತ ಹಕ್ಕಿ ಜೊತೆ
ದನಿಯೆತ್ತಿದರೆ ಸಾಕು, ಅರ್ಥವಾಗುವ ಭಾವ.
ಅರ್ಥವಾಗದು ಪತ್ರಿಕೆಯ ಭಯೋತ್ಪಾದಕ
ಭಾಷೆ. ಏರಿ ಮನುಷ್ಯ ಆಕಾಶಕ್ಕೆ ತೆಕ್ಕೆ –
ಜಾರುವದೆ ನೆತ್ತರವ ಚೆಲ್ಲಿ ರಸಾತಳಕ್ಕೆ ?
ನೆಲದಲ್ಲಿ ನಡೆಗಲಿತಾಗ ಬದುಕು ಸಮತೂಕ.

ಗಂಗಾಧರ ಚಿತ್ತಾಲರ ಕೊನೆಯ ಪದ್ಯಗಳ ಗಂಭೀರ ಚಿಂತನಶೀಲ ಲಯದ ಇಂಥ ಪದ್ಯಗಳು ನಮ್ಮ ಕಾಲದ ನೋವುಗಳ ಬಗ್ಗೆ ಅಡಿ ಟಿಪ್ಪಣಿಗಲಾಗಿವೆ.

ಸುನೀತದ ಬಂಧದಿಂದಾಗಿ ಎಲ್ಲಿಯೂ ಸಡಿಲವಾದ ಹೇಳಿಕೆಗಳಿವೆಯೆನ್ನುವ ಭಾವನೆ ಬರುವುದಿಲ್ಲ. ಸಾಂದ್ರವಾದ ಎಚ್ಚರದ ಕಲೆಗಾರಿಕೆ ಇಲ್ಲಿ ಕಂಡುಬರುತ್ತದೆ. 'ಗುಲ್‌ಮೊಹರ್' ಸುನೀತಗಳು ಪರಿಪೂರ್ಣ ಸಾಧನೆಗಳಾಗಿವೆ.

.... ದೇಶದುದ್ದಗಲಕೂ
ಹರಿದು ತಿನ್ನುವ ಹದ್ದುಗಳ ಸದ್ದು ಮೇಲಿಂದ
ಕೆಳತನಕ. ಉಗಮದಲ್ಲಿಯೆ ನದಿಯು ಬತ್ತಿದರೆ
ಹರಿದ ಮಾತೆಲ್ಲಿ ? ಸಂಗಮಕಾವ ಪುರುಷಾರ್ಥ ?

ಕಣವಿಯವರು ಬರೆದಿರುವ ಕವನಗಳ ಸಂಖ್ಯೆ, ವೈವಿಧ್ಯ ಹಾಗೂ ಅದರಲ್ಲಿ ಸಾಂದರ್ಭಿಕ ಕವನಗಳ ಬಾಹುಳ್ಯದಿಂದಾಗಿ ಅವುಗಳ ಹಿಂದಿಟ್ಟುಕೊಂಡು ಏಕಸೂತ್ರತೆಯನ್ನು ಕೊಡುವ ಜೀವನದ ಬಗೆಗಿನ ವಿಶಿಷ್ಟ ಕಾಣ್ಕೆಯನ್ನು ನಾವು ಅಲಕ್ಷ್ಯ ಮಾಡುವ ಸಾಧ್ಯತೆಯಿದೆ. ನಿಜವೆಂದರೆ ಅವರ ಒಟ್ಟಾರೆ ಸೃಜನಶೀಲತೆಯ ಮೂಲವಿರುವುದು ಅವರ ಈ ಕಾಣ್ಕೆಯಲ್ಲಿ. ಮನುಷ್ಯನ ಬದುಕು, ನಿಸರ್ಗ, ಇತಿಹಾಸಬದ್ಧವಾದ ನಾಗರೀಕತೆ ಇವೆಲ್ಲವುಗಳು ಸೇರಿಕೊಂಡ ಜೀವಜಾಲವೊಂದರ, ಎಲ್ಲ ಏಳುಬೀಳುಗಳ ನಡುವೆ ಮಂಗಳಕಾರಿಯಾಗಿರುವ ಜೀವಜಾಲವೊಂದರಲ್ಲಿರುವ ನಂಬಿಕೆಯೆ ಈ ಕಾಣ್ಕೆಯಾಗಿದೆ. ಈ ಕಾಣ್ಕೆ ಕೆಡುಕನ್ನು ಅರ್ಥಮಾಡಿಕೊಳ್ಳದೆ ಇರುವಂಥ ಬೋಳೆತನದ್ದಲ್ಲ. "ಪ್ರಕೃತಿ ಸ್ವಚ್ಛಂದ; ಲಯ ತಪ್ಪಿದರೆ ಹಿಂಸೆ, ಆಘಾತ", ಎನ್ನುವುದು ಅರ್ಥಮಾಡಿಕೊಂಡಿರುವ ತಿಳುವಳಿಕೆ ಇಲ್ಲಿದೆ. ಆದರೆ ಅಷ್ಟೇ ಬಲವಾದ ಶ್ರದ್ಧೆ ಇಡೀ ಜೀವಜಾಲದಲ್ಲಿರುವ ಅಂತರ್ ಸಂಬಂಧಗಳ ಬಗ್ಗೆಯೂ ಇದೆ.

ಈ ಮನದ ಮಧ್ಯಬಿಂದುವಿನಿಂದ ಹೊರಟ ವ –
ರ್ತುಳ ರೇಖೆ ಜೀವಿ ಜೀವಿಯ ಸುತ್ತಿ, ಬಾನಲೆವ
ಬೆಳಕನಾಲಿಂಗಿಸಿದೆ. (ವರ್ತುಳ)

ಆದ್ದರಿಂದಲೇ ನದಿಗಳು ಬತ್ತಿದಾಗಲೂ ಇನ್ನೆಲ್ಲೋ ಒರತೆಯೊಂದರಲ್ಲಿ ನೀರು ಹುಟ್ಟುವುದೆಂಬ ನಂಬಿಕೆ ಇದೆ. ಈ ನಂಬಿಕೆಗೆ ನೆಲೆಗಟ್ಟಾಗಿ ಜೀವನದ ನಿಧಾನ ಗತಿಯ ಲಯಗಳಿಗೆ ಹೊಂದಿಕೊಂಡರೆ ಸಾಕು, ಬರಬೇಕಾದ ಹದ ಒಂದು ದಿನ ತಾನೇ ಬರುತ್ತದೆಯೆನ್ನುವ ನಿರೀಕ್ಷೆಯೂ ಇದೆ. ಇದರಿಂದಾಗಿಯೆ ಕಣವಿಯವರ ಪದ್ಯಗಳ ಹಿಂದೆ ಅಪಾರವಾದ ತಾಳ್ಮೆ ಮತ್ತು ಆಶಾಭಾವಗಳಿವೆ. ನನ್ನ ತಲೆಮಾರಿನವರಿಗೆ ಗುಮಾನಿ ಹುಟ್ಟಿಸುವಂಥ ನಿರುಮ್ಮಳತೆಯಿದೆ. ಅವರ ಪದ್ಯಗಳಲ್ಲಿ ಪದೇ ಪದೇ ಬರುವ ರೂಪಕವೆಂದರೆ 'ಜೀಕ', ಎರಡು ದಡಗಳ ನಡುವೆ, ದ್ವಂದ್ವಗಳ ನಡುವೆ ಮನುಷ್ಯನ ಇಬ್ಬಂದಿತನದ ನಡುವೆ ಕಣವಿಯವರಿಗೆ ಕೊರಕಲುಗಳು ಕಾಣುವುದಿಲ್ಲ. ಹುಮ್ಮಸ್ಸಿನಿಂದ 'ಜೀಕ' ಹಾಕುವ ಸಾಧ್ಯತೆಗಳು ಕಾಣುತ್ತವೆ. ಕಣವಿಯವರ ಶ್ರದ್ಧೆ ನನ್ನಂಥವರಿಗೆ ಕಳೆದು ಹೋದ ಜಗತ್ತಿನ ಬಳುವಳಿಯಾಗಿ ಕಾಣಬಹುದು. ಆದರೆ ಅಲ್ಲಿಯ ಸಮತೂಕದ, ಎಚ್ಚರದ

ಕಲೆಗಾರಿಕೆಯಲ್ಲಿ ಈ ಶ್ರದ್ಧೆ ಒಡಮೂಡಿ ಬಂದಾಗ ಅವರ ಕಾವ್ಯದ ಬಗ್ಗೆ ಕೃತಜ್ಞತೆಯ ಭಾವನೆ ಬರುತ್ತದೆ.

ಕತ್ತಲೆಗು ಕಣ್ಣುಂಟು.
ಹೊಸೆದು ಹುರಿಗೊಳ್ಳುವುದು ಜೀವ ಜೀವದ ನಂಟು.
(ಏನಾಗಬೇಕಿಹುದೊ)
ಮರ್ತ್ಯಕ್ಕೆ ಬೇಕು ಕಾತರದ ಪ್ರೀತಿಯ ಸ್ಪರ್ಶ
(ಗುರಿ)

ಈ ವಯಸ್ಸಿನಲ್ಲೂ ಕಣವಿಯವರಿಗೆ ಅಧ್ಯಾತ್ಮದ ನಿರ್ಗುಣ ಆಕಾಶದ ಬದಲಾಗಿ ಸುನೀತದ ಬಂಧ – ಸ್ವಚ್ಛಂದಗಳೇ ಆಪ್ತವಾಗಿರುವುದು ಕನ್ನಡ ಭಾಷೆಯ ಸೌಭಾಗ್ಯ.

ರಾಜೇಂದ್ರ ಚೆನ್ನಿ

ಎರಡು ಮಾತು

ಕನ್ನಡ ಸಾಹಿತ್ಯ ಪರಿಷತ್ತು ನಮ್ಮ ನಾಡಿನ ಬಹು ದೊಡ್ಡ ಪ್ರಾತಿನಿಧಿಕ ಸಂಸ್ಥೆ. ಇದರ ಕಾರ್ಯರಂಗ ಹಾಗೂ ಹೊಣೆಗಾರಿಕೆ ಹರಡಿಕೊಂಡು ಬಂದು ಇದೀಗ ನೂರು ವರುಷದ ಸಂಭ್ರಮದಲ್ಲಿದೆ. ಈ ಸಂದರ್ಭವನ್ನು ಸಾರ್ಥಕಗೊಳಿಸಿ ಕೊಳ್ಳಲು ಪರಿಷತ್ತು ರೂಪಿಸಿಕೊಂಡಿರುವ ಯೋಜನೆಗಳಲ್ಲಿ ನೂರು ಮೌಲಿಕ ಕೃತಿಗಳ ಪುನರ್ ಮುದ್ರಣವೂ ಒಂದಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ನನ್ನ 'ಸುನೀತ ಸಂಪದ'ವನ್ನು ಶತಮಾನೋತ್ಸವದ ನೆನಪಿನಲ್ಲಿ ಪ್ರಕಟಿಸಲು ಆಯ್ಕೆ ಮಾಡಿಕೊಂಡಿರುವುದು ಸಂತೋಷದ ಸಂಗತಿ. ಇದಕ್ಕಾಗಿ ಆಯ್ಕೆ ಸಮಿತಿಗೂ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಪುಂಡಲೀಕ ಹಾಲಂಬಿಯವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

'ಸುನೀತ ಸಂಪದ'ವನ್ನು ಮೊದಲು ಪ್ರಕಟಿಸಿದ (೨೦೦೨) ಲೋಹಿಯಾ ಪ್ರಕಾಶನದ ಶ್ರೀ ಸಿ. ಚೆನ್ನಬಸವಣ್ಣನವರನ್ನು ಈ ಸಂದರ್ಭದಲ್ಲಿ ನೆನೆಯಬೇಕು. ನಂತರ ನಾನು ಬರೆದ ಸುಮಾರು ಐವತ್ತು ಸುನೀತಗಳನ್ನು ಈ ಆವೃತ್ತಿಯಲ್ಲಿ ಆಯಾ ವಿಭಾಗಗಳಲ್ಲಿ ಸೇರಿಸಲಾಗಿದೆ. ಡಾ. ಜಿ.ಎಸ್. ಶಿವರುದ್ರಪ್ಪನವರು ಆಗ ಬರೆದ ಬೆನ್ನುಡಿಯನ್ನು ಈಗ ಹೊನ್ನುಡಿಯಾಗಿ ಒಳಗೆ ಮುದ್ರಿಸಲಾಗಿದೆ.

ನಾಡು–ನುಡಿ–ಸಂಸ್ಕೃತಿಯ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುತ್ತ ಕನ್ನಡಿಗರ ಬದುಕಿನ ಭಾಗವಾಗಿ ಮುನ್ನಡೆಯುವುದೆಂದು ಆಶಿಸುತ್ತೇನೆ.

ಧಾರವಾಡ
೨೪–೫–೨೦೧೪ **– ಚೆನ್ನವೀರ ಕಣವಿ**

ಅರ್ಪಣೆ

ನನ್ನ ಬದುಕಿನ ಭಾಗ (ಭಾಗ್ಯ) ವಾಗಿದ್ದ

ಆತ್ಮೀಯ ಸ್ನೇಹಿತ

ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರಿಗೆ

ಅರ್ಪಿತ

ಹೊನ್ನುಡಿ

ಇಡೀ ಆಧುನಿಕ ಕಾವ್ಯ ಸಂದರ್ಭದಲ್ಲಿ ಚೆನ್ನವೀರ ಕಣವಿಯವರಷ್ಟು ವಿಪುಲ ಸಂಖ್ಯೆಯ ಸಾನೆಟ್ಟುಗಳನ್ನು ಬರೆದ ಕವಿ ಬೇರೊಬ್ಬರಿಲ್ಲ. ಬದುಕಿನ ಅನೇಕ ರಸಕ್ಷಣಗಳನ್ನು ಪರಿಭಾವನೆಯ ಧ್ಯಾನಕೇಂದ್ರಕ್ಕೆ ತಂದುಕೊಂಡು, ಅಲ್ಲಿ ನಿಷ್ಪನ್ನವಾಗುವ ಭಾವಾನುಭವಗಳನ್ನು ತಕ್ಕ ಎಚ್ಚರದ ಅಭಿವ್ಯಕ್ತಿಯ ರಚನಾ ಕೌಶಲದೊಳಗೆ ಮೂರ್ತೀಕರಿಸಿದಂತಿರುವ ಇಲ್ಲಿನ ಸಾನೆಟ್ಟುಗಳ ಸಾವಧಾನ ಶಿಲ್ಪ ಯಾರನ್ನೂ ಬೆರಗುಗೊಳಿಸುತ್ತದೆ. ಚಳುವಳಿಗಳ ಮೇಲೆ ಚಳುವಳಿಗಳು ಬಂದು ಹೋದ ಕಳೆದ ಐದಾರು ದಶಕಗಳ ಕಾಲಮಾನದ ಉದ್ದಕ್ಕೂ ಸಾನೆಟ್ಟುಗಳನ್ನು ಬರೆಯುತ್ತ ಬಂದ ಕಣವಿಯವರು, ಯಾವ ಕಾರಣಕ್ಕೂ ಸಾನೆಟ್ಟಿನ ಮೂಲ ಆಕೃತಿಯನ್ನು ಸಡಿಲಗೊಳಿಸದೆ, ಸಮಸ್ತ ಲಕ್ಷಣ ಸಮನ್ವಿತವಾಗಿ ಅದನ್ನು ಹರಳುಗೊಳಿಸುವ ಕಲೆಗಾರಿಕೆಯನ್ನು ಕಾಯ್ದುಕೊಂಡು ಬಂದದ್ದು ಒಂದು ವಿಶೇಷದ ಸಂಗತಿಯಾಗಿದೆ.

ಕಣವಿಯವರ ಈ 'ಸುನೀತ ಸಂಪದ'ವನ್ನು ಓದುವುದೆಂದರೆ ಶ್ರೇಷ್ಠ ಕಲಾವಿದನ ಕಲಾಶಾಲೆಯೊಂದನ್ನು ಪ್ರವೇಶಿಸಿದಂತೆ ! ಭಾಷೆಯನ್ನು ಬಣ್ಣದಂತೆ ಬಳಸಿ ಕಣವಿಯವರ ಪ್ರತಿಭೆ ರೇಖಿಸಿರುವ ಒಂದೊಂದು ಸುನೀತ ಚಿತ್ರವೂ, ನಿಸರ್ಗಪರವಾದ ಅವರ ಮುಗಿಯದ ಬೆರಗನ್ನೂ, ಲೋಕವಾಸ್ತವಗಳ ಬಗೆಗೆ ಅವರು ಸ್ಪಂದಿಸುವ ಪರಿಗಳನ್ನೂ, ಗಂಭೀರವಾದ ಚಿಂತನಶೀಲತೆಯನ್ನೂ, ಬಹುಸಂಖ್ಯೆಯ ವ್ಯಕ್ತಿಚಿತ್ರಗಳ ಮೂಲಮಾನದಲ್ಲಿ ಸಾಧಿಸುವ ಮಾನವೀಯ ಬಾಂಧವ್ಯಗಳ ವಿಸ್ತರಣೆಯನ್ನೂ ಮತ್ತು ಕನ್ನಡ ಸಂಸ್ಕೃತಿ ಹಾಗೂ ಪರಂಪರೆಯೊಂದಿಗೆ ಅವರು ನಡೆಯಿಸುವ ಅನುಸಂಧಾನವನ್ನೂ ಪ್ರಕಟಿಸುತ್ತದೆ.

– ಜಿ. ಎಸ್. ಶಿವರುದ್ರಪ್ಪ

ಪರಿವಿಡಿ

		ಪುಟ ಸಂಖ್ಯೆ
	೧. ವ್ಯಕ್ತಿ ವ್ಯಕ್ತಿತ್ವ	೩
೧.	ಅಮರ ತೇಜಃಪುಂಜಿ	೫
೨.	ನಮ್ಮ ಬಾಪು	೬
೩.	ಹುತಾತ್ಮ	೭
೪.	ನೆನೆವುದೊಂದಗ್ಗಳಿಕೆ	೮
೫.	ಮಾಯಾಕೋಲಾಹಲ	೯
೬.	ಕಿತ್ತೂರಿನ ಕಿಡಿಗಳು	೧೦
೭.	ಕ್ರಾಂತಿಕಲಿ	೧೧
೮.	ಬುದ್ಧೋದಯ	೧೨
೯.	ಶ್ರೀ ಕವಿರತ್ನಂ	೧೩
೧೦.	ಷೆಲ್ಲಿ ಕವಿಯನ್ನು ಕುರಿತು	೧೪
೧೧.	'ಶ್ರೀ'ಯವರನ್ನು ನೆನೆದು	೧೫
೧೨.	ಶ್ರೀ ಅರವಿಂದ ಮಹರ್ಷಿ	೧೬
೧೩.	ರಸ ಋಷಿ – ೧	೧೭
೧೪.	ರಸ ಋಷಿ – ೨	೧೮
೧೫.	ರಸ ಋಷಿ – ೩	೧೯
೧೬.	ತುಂಬುದಿಂಗಳು	೨೦
೧೭.	ಮುದ್ದಣ – ಮನೋರಮೆ	೨೧
೧೮.	ಅರುವತ್ತರೈಸಿರಿ	೨೨
೧೯.	ಶತಾಯುಷಿ ವಿಶ್ವೇಶ್ವರಯ್ಯನವರು	೨೩
೨೦.	ಉತ್ತಂಗಿಯವರನ್ನು ನೆನೆದು	೨೪
೨೧.	ನಮಿಸು ಗೋವಿಂದಪೈ	೨೫
೨೨.	ದ.ಬಾ.ಕು. ಸ್ಮೃತಿ	೨೬
೨೩.	ರಸಿಕರಂಗ	೨೭
೨೪.	ಹಳಕಟ್ಟಿಯವರು	೨೮

೨೫.	ಗಡಿಯಲ್ಲಿ ಮಡಿದ ಯೋಧರು	೨೯
೨೬.	ಎಪ್ಪತ್ತರ ಬೇಂದ್ರೆ	೩೦
೨೭.	ಲಾಲಬಹಾದ್ದೂರ ಶಾಸ್ತ್ರಿ	೩೧
೨೮.	ತೀ.ನಂ. ಶ್ರೀಯವರ ಪಯಣ	೩೨
೨೯.	ದಾಸೋಹ ದೀಪ	೩೩
೩೦.	ಕರಿಕಿ – ಕಣಗಿಲ	೩೪
೩೧.	ವಿನಾಯಕರಿಗೆ ವಂದನೆ	೩೫
೩೨.	ಸರ್ವಜ್ಞ ಕವಿ	೩೬
೩೩.	ಶ್ರೀ ಜ. ಚ. ನಿ	೩೭
೩೪.	ಕನ್ನಡದ ಹೊನ್ನಪುರ	೩೮
೩೫.	ಪು. ತಿ. ನ.	೩೯
೩೬.	ಪಂಜೆಯವರನ್ನು ನೆನೆದು	೪೦
೩೭.	'ಸಿಂಪಿ' ನೊಳಗಿನ ಮುತ್ತು	೪೧
೩೮.	ಸ್ನೇಹ ಕಾರ್ತೀಕ	೪೨
೩೯.	ಗೌರೀಶರ ಗೌರವ	೪೩
೪೦.	ಸಿದ್ಧಗಂಗಾಶ್ರೀ	೪೪
೪೧.	ಜಯಕರ್ನಾಟಕ ತಿಲಕ	೪೫
೪೨.	ಕನ್ನಡ ಕುಲದೀಪಕ	೪೬
೪೩.	ವ್ಯಾಸಂಗ ಸಂಗಮ	೪೭
೪೪.	ಕುಂದಣ	೪೮
೪೫.	ನೇಣು ನುಡಿದದ್ದು	೪೯
೪೬.	ಜಯದೇವಿತಾಯಿ	೫೦
೪೭.	ಕಟ್ಟೀಮನಿಯವರನ್ನು ನೆನೆದು	೫೧
೪೮.	ಸೌಜನ್ಯದ ಗಣಿ	೫೨
೪೯.	ಧವಳಶ್ರೀ	೫೩
೫೦.	ಶಾಂತರಸ	೫೪
೫೧.	ಬೆಳಗಿನ ಭೆಟ್ಟಿ	೫೫
೫೨.	ನಮ್ಮ ತಿಮ್ಮಕ್ಕನಿಗೆ	೫೬

೫೩.	ಡಾ. ಎಚ್. ಟಿ. ಸಾಸನೂರ ನೆನೆದು	೫೭
೫೪.	ಅಚ್ಚ ಪ್ರತಿಭೆಯ ಹುಚ್ಚು	೫೮
೫೫.	ಅಗಲಿದ ಲೇಖಕ ಮಿತ್ರರನ್ನು ನೆನೆದು	೫೯
೫೬.	'ಮಹಾಮಾರ್ಗ'ದ ಪಥಿಕ	೬೦
೫೭.	ಶ್ರೀ ಗುರು ತೋಂಟದಾರ್ಯ	೬೧
೫೮.	ಶ್ರೀ ಸಾಮಾನ್ಯರ ಸಿದ್ಧಲಿಂಗ	೬೨
೫೯.	ಸಿದ್ಧರಾಮ ಜಂಬಲದಿನ್ನಿ	೬೩
೬೦.	ಲಂಕೇಶ	೬೪
೬೧.	ಬರೆದು ತೀರದ ಬದುಕು	೬೫
೬೨.	ಸೊಡರ ಕುಡಿ ಚಿತ್ರ	೬೬
೬೩.	ದೇಜಗೌ ಗೌರವಾರ್ಥ	೬೭
೬೪.	ಅಂತರಂಗದ ರತ್ನ	೬೮
೬೫.	ಸ್ವಯಂಪ್ರಭೆ	೬೯
೬೬.	ಹಳ್ಳಿಕೇರಿ ಗುದ್ಲೆಪ್ಪ – ಸ್ಮರಣೆ	೭೦
೬೭.	ನಮ್ಮ ಇಬ್ರಾಹಿಂ ಸಾಹೇಬರು	೭೧
೬೮.	ಕನಕದಾಸರಿಗೆ	೭೨
೬೯.	ನಿಟ್ಟೂರು ನಮನ	೭೩
೭೦.	ಅಪ್ಪಣ್ಣ ಗೌಡರಿಗೆ	೭೪
೭೧.	ಪಾಪು ಪ್ರಸ್ಥಾನ	೭೫
೭೨.	ಚಂಪಾ : ದೂರವಾಣಿ	೭೬
೭೩.	ನಾ ಮೊಗಸಾಲೆ	೭೭
೭೪.	ಕವಿಮಿತ್ರ ನಿಸಾರ್ ಅಹಮದ್	೭೮
೭೫.	ಜೀವನ ಕಲಾದರ್ಶಿ	೭೯
೭೬.	ಶಿವನ ಸೊಮ್ಮು	೮೦
೭೭.	ಕಣ್ಮುಚ್ಚಿಕಂಡ ಕವಿತೆ	೮೧
೭೮.	ಚೊಕ್ಕಾಡಿಯ ಹಕ್ಕಿಗಳು	೮೨
೭೯.	ಸಿದ್ಧಾರೂಢ ಭಾರತಿ – ೧	೮೩
೮೦.	ಸಿದ್ಧಾರೂಢ ಭಾರತಿ – ೨	೮೪

೮೧.	ಸಿರಿಗೆರೆಯ ಹಿರಿಯ ಗುರು	೮೫
೮೨.	ಹೊಂದೊಡಿಗೆ	೮೬
೮೩.	ಕವಿಮಿತ್ರ ಜಿನದತ್ತರಿಗೆ	೮೭
೮೪.	ಕೃಷ್ಣ ದೇಶಪಾಂಡೆಯವರಿಗೆ	೮೮
೮೫.	ಸದಾನಂದ ಸಂಸ್ಕೃತಿ	೮೯
೮೬.	ಬಾನುತುಂಬಿದ ಚುಕ್ಕೆ	೯೦
೮೭.	ಅಶ್ವತ್ಥರಿಗೆ ಸ್ವಸ್ತಿ	೯೧
೮೮.	ಏಚ್ಚೆಸ್ಕೆಯವರನ್ನು ನೆನೆದು	೯೨
೮೯.	ಕವಿಮಿತ್ರ ಜಿ. ಎಸ್.ಸಿದ್ಧಲಿಂಗಯ್ಯ	೯೩
೯೦.	ಯಶೋದಾ – ಭಟ್ಟ ದಂಪತಿಗಳಿಗೆ	೯೪
೯೧.	ನೋವೆ ಹಿತವೆಂದ ‘ರವಿ’	೯೫
೯೨.	ಶಾ. ಮಂ. ಕೃಷ್ಣರಾಯರು	೯೬
೯೩.	ಬೆಲ್ಲದಚ್ಚಿನ ಬಾಗಿನ	೯೭
೯೪.	ರಾಜಮಾರ್ಗ	೯೮
೯೫.	ಲೋಹಿಯಾ ಕಂಡ ಚಿಗುರು	೯೯
೯೬.	ವಿದ್ಯಾಚೇತನ	೧೦೦
೯೭.	ಬೆಳಗಾವಿಯಲ್ಲಿ ಬೆಳಗು	೧೦೧
೯೮.	ಸಮಗ್ರ ಓದಿನ ಹರಿಕಾರ	೧೦೨
೯೯.	ನೂರು ಹರಕೆ	೧೦೩
೧೦೦.	ನಂದಾದೀಪ ನೂರು	೧೦೪
೧೦೧.	ಎಮ್ಮ ಅಕಬರ ಅಲಿ	೧೦೫
೧೦೨.	ಜೀವ – ಭಾವ – ದೇವಕಣ	೧೦೬
	೨. ನಿಸರ್ಗ ಸ್ಪಂದನ	**೧೦೭**
೧೦೩.	ಈ ಘಟಪ್ರವಾಹ	೧೦೯
೧೦೪.	ಹಗಲುಗನಸು	೧೧೦
೧೦೫.	ಉಷಾ	೧೧೧
೧೦೬.	ಮಾನಸ ಪೂಜೆ	೧೧೨
೧೦೭.	ಒಂದು ಸಂಜೆ	೧೧೩

೧೦೮.	ಹೂಬೇಲಿ	೧೧೪
೧೦೯.	ಅಶ್ರುತಗಾನ	೧೧೫
೧೧೦.	ಬೇಲಿಯ ಮೇಲಿನ ನೀಲಿಯ ಹೂಗಳು	೧೧೬
೧೧೧.	ನೆಲ – ಮುಗಿಲು	೧೧೭
೧೧೨.	ಪಕ್ಷಿತಟಾಕ	೧೧೮
೧೧೩.	ಪ್ರತಿ ಯುಗಾದಿಯ ನಸುಕು	೧೧೯
೧೧೪.	ಬೆಳುವಲದ ಬಾಗಿನ	೧೨೦
೧೧೫.	ಖಗ್ರಾಸ ಗ್ರಹಣ	೧೨೧
೧೧೬.	ಆಷಾಢ	೧೨೨
೧೧೭.	ಶ್ರಾವಣ	೧೨೩
೧೧೮.	ಭಾದ್ರಪದ	೧೨೪
೧೧೯.	ಆಶ್ವಿನ	೧೨೫
೧೨೦.	ಕಾರ್ತಿಕ	೧೨೬
೧೨೧.	ಮಾರ್ಗಶಿರ	೧೨೭
೧೨೨.	ಪುಷ್ಯ	೧೨೮
೧೨೩.	ಮಾಘ	೧೨೯
೧೨೪.	ಫಾಲ್ಗುಣ	೧೩೦
೧೨೫.	ಹಳದಿ ಹೂ – ಚೆಂಡು	೧೩೧
೧೨೬.	ಕಾರ್ತೀಕದ ಮೋಡ	೧೩೨
೧೨೭.	ಹಕ್ಕಿಗಳು.	೧೩೩
೧೨೮.	ಯುಗಾದಿ : ೧೯೮೮	೧೩೪
೧೨೯.	ಗುಲ್ ಮೊಹರ್ – ೧	೧೩೫
೧೩೦.	ಗುಲ್ ಮೊಹರ್ – ೨	೧೩೬
೧೩೧.	ಬಡವರ ಬಂಗಾರ	೧೩೭
೧೩೨.	ಮತ್ತೆ ನೀಲಿಯ ಹೂವು !	೧೩೮
೧೩೩.	ಕಾಣದ ಬೇರು	೧೩೯
೧೩೪.	ನಿಸರ್ಗ – ಮಾನವ	೧೪೦
೧೩೫.	ಯಾವ ಪುರುಷಾರ್ಥಕ್ಕೆ ?	೧೪೧

೧೩೬.	ನಿಯಮ : ಸಂಭ್ರಮ	೧೪೨
೧೩೭.	ಮೋಡಗಳು	೧೪೩
೧೩೮.	ಅತ್ತಿ ಕೊಳ್ಳದಲ್ಲಿ ಸೂರ್ಯ	೧೪೪
೧೩೯.	ರಹಸ್ಯ	೧೪೫
೧೪೦.	ಯುಮ್ಥಾಂಗ್ ಕಣಿವೆ	೧೪೬
೧೪೧.	ಹಕ್ಕಿ – ಕೊರಳು	೧೪೭
	೩. ಕೃತಿ – ಆಕೃತಿ	**೧೪೯**
೧೪೨.	ಗೋಳಗುಮ್ಮಟ	೧೫೧
೧೪೩.	'ಶ್ರೀ ರಾಮಾಯಣದರ್ಶನ'ವನೋದಿ	೧೫೨
೧೪೪.	ವಿದ್ಯಾಸೌಧ	೧೫೩
೧೪೫.	'ವಿದ್ಯಾಸೌಧ'ದ ಗೋಪುರದಿಂದ	೧೫೪
೧೪೬.	ಬಿಸಮಿಲ್ಲಾರ ಶಹನಾಯಿ ವಾದನ ಕೇಳಿ	೧೫೫
೧೪೭.	ಗೊಮ್ಮಟೇಶ	೧೫೬
೧೪೮.	ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ	೧೫೭
೧೪೯.	ಕುಂಜಾಲು ಕಣಿವೆ	೧೫೮
೧೫೦.	ಗಾಂಧಿ ಓದಿದ ಗ್ರಂಥ – ೧	೧೫೯
೧೫೧.	ಗಾಂಧಿ ಓದಿದ ಗ್ರಂಥ – ೨	೧೬೦
೧೫೨.	'ದಾಂಪತ್ಯ ಗೀತ'ಕ್ಕೆ	೧೬೧
೧೫೩.	ಹರಿವ ನೀರಿನ ಮರ್ಮ	೧೬೨
೧೫೪.	ಲೇಖನಿ	೧೬೩
೧೫೫.	ಪ್ರಾಕೃತ ಪ್ರತಿಭೆ	೧೬೪
	೪. ನಿವೇದನೆ	**೧೬೫**
೧೫೫.	ಹೋರು ಬೀಳ್ವನ್ನೆಗಂ	೧೬೭
೧೫೬.	ತಂಗಿಯ ಓಲೆಯನ್ನೋದಿ	೧೬೮
೧೫೭.	ನಾವು ನಾಲ್ವತ್ತು ಕೋಟಿ	೧೬೯
೧೫೮.	ಅಖಂಡ ಕರ್ನಾಟಕ	೧೭೦
೧೫೯.	ಪ್ರಾರ್ಥನೆ	೧೭೧
೧೬೦.	ಗೆಲುವೆನೆಂಬುವ ಭಾಷೆ	೧೭೨

೧೬೧.	ಉರುಳುರುಳು ಕಂಬನಿಯೆ !	೧೭೩
೧೬೨.	ಕವಿತೆಗೆ	೧೭೪
೧೬೩.	ಕರ್ನಾಟಕ ಕಾಲೇಜಿನ ವಜ್ರಮಹೋತ್ಸವಕ್ಕೆ	೧೭೫
೧೬೪.	ವೇಷ	೧೭೬
೧೬೫.	ಓದುವದೆ ಇಲ್ಲವೆ ?	೧೭೭
೧೬೬.	ಓದುವದೆ ಇಲ್ಲವೆ – ೨	೧೭೮
೧೬೭.	'ವಿಮೋಚನೆ'ಗೆ ಬೆಳ್ಳಿ ರೇಖೆ	೧೭೯
	೫. ಜಿಜ್ಞಾಸೆ	೧೮೧
೧೬೮.	ಕಿತ್ತೂರ ಕೋಟೆಯನ್ನು ಕಂಡು	೧೮೩
೧೬೯.	ಮಾತಂಗ ಬೆಟ್ಟದಿಂದ – ೧	೧೮೪
೧೭೦.	ಮಾತಂಗ ಬೆಟ್ಟದಿಂದ – ೨	೧೮೫
೧೭೧.	ಮಾತಂಗ ಬೆಟ್ಟದಿಂದ – ೩	೧೮೬
೧೭೨.	ಸಾವ ಗೆದ್ದಿಹ ಬದುಕು	೧೮೭
೧೭೩.	ಕಾಲಾತೀತ	೧೮೮
೧೭೪.	ವರ್ತುಳ	೧೮೯
೧೭೫.	ಪ್ರಣಯ – ಪ್ರೀತಿ	೧೯೦
೧೭೬.	ದಾಹ	೧೯೧
೧೭೭.	ಉಪ್ಪುನೀರು	೧೯೨
೧೭೮.	ದೀಪಾವಳಿ	೧೯೩
೧೭೯.	ಕತ್ತಲೆ – ಬೆಳಕು	೧೯೪
೧೮೦.	ರಾತ್ರಿ	೧೯೫
೧೮೧.	ಕಣ್ಣಿರುವಷ್ಟು ನೋಟ	೧೯೬
೧೮೨.	ಏನಾಗಬೇಕಿಹುದೊ	೧೯೭
೧೮೩.	ಹಂಸಕ್ಷೀರ	೧೯೮
೧೮೪.	ಕಾಣಿಕೆ	೧೯೯
೧೮೫.	ಮುಕ್ಕಿ ಮೊಗೆಯುವೆ ಕಾಲ !	೨೦೦
೧೮೬.	ಅಮೃತ ಶಿಲೆಯಲ್ಲ	೨೦೧
೧೮೭.	ಒಡಲ ನರಕದ ಭಾಂಡ	೨೦೨

೧೮೮.	ಸುಗ್ಗಿ	೨೦೩
೧೮೯.	ಕಲಾಕೃತಿ	೨೦೪
೧೯೦.	ಅಂತರ	೨೦೫
೧೯೧.	ಆಚೆ	೨೦೬
೧೯೨.	ಚೈತನ್ಯ ತ್ರಿಕೂಟ	೨೦೭
೧೯೩.	ಗೋಪುರದ ಗಡಿಯಾರ	೨೦೮
೧೯೪.	ಜಿಜ್ಞಾಸೆ	೨೦೯
೧೯೫.	ಹಿರಿಯರ ಸಾವು	೨೧೦
೧೯೬.	ನಿತ್ಯ ಪಯಣ – ೧	೨೧೧
೧೯೭.	ನಿತ್ಯ ಪಯಣ – ೨	೨೧೨
೧೯೮.	ಶರಣ ಭಾವಕ್ಕೆ ಹೊಸ ರೆಕ್ಕೆ	೨೧೩
೧೯೯.	ಒಲವು	೨೧೪
೨೦೦.	ಪ್ರೀತಿ – ಸಂಬಂಧ	೨೧೫
೨೦೧.	ಒಂದು – ಹಲವು	೨೧೬
೨೦೨.	ಸ್ವಾತಂತ್ರ್ಯ : ೪೦ –೧	೨೧೭
೨೦೩.	ಸ್ವಾತಂತ್ರ್ಯ :೪೦ – ೨	೨೧೮
೨೦೪.	ಸ್ವಾತಂತ್ರ್ಯ : ೪೦ – ೩	೨೧೯
೨೦೫.	ಅರುವತ್ತರಾಚೆ – ೧	೨೨೦
೨೦೬.	ಅರುವತ್ತರಾಚೆ – ೨	೨೨೧
೨೦೭.	ಮೂರ್ತಿಪೂಜೆ	೨೨೨
೨೦೮.	ಗ್ರಂಥ ನಿವೇದನೆ	೨೨೩
೨೦೯.	ನನ್ನವೇ ನಾಲ್ಕು ಶಬ್ದ	೨೨೪
೨೧೦.	ಭಾವ – ಚಿತ್ರ – ಬದುಕು – ೧	೨೨೫
೨೧೧.	ಭಾವ – ಚಿತ್ರ – ಬದುಕು – ೨	೨೨೬
೨೧೨.	ಮೂರಾಬಟ್ಟೆ	೨೨೭
೨೧೩.	ಅವಸ್ಥೆ	೨೨೮
೨೧೪.	ಸೌಂದರ್ಯ ಸ್ಪರ್ಧೆ	೨೨೯
೨೧೫.	ದಂತಪಂಕ್ತಿಯ ನಡುವೆ	೨೩೦

೨೧೬. ಜೀವನ – ನಾಟಕ ೨೩೧

೨೧೭. ಮುಗಿಯದ ಹಾಡು ೨೩೨

೨೧೮. ಕವಿಯ ಧನ್ಯತೆ ೨೩೩

೨೧೯. ಈ ಕ್ಷಣದ ಸುತ್ತು ೨೩೪

೨೨೦. ನಗರ ೨೩೫

೨೨೧. ಯಾವುದಕ್ಕೂ ಒಂದು ಮಿತಿಯುಂಟು ೨೩೬

೨೨೨. ಬೇರೊಂದು 'ಕಲ್ಯಾಣ' ೨೩೭

೨೨೩. ಅದಕ್ಕದೇ ಮುನ್ನುಡಿ ೨೩೮

೨೨೪. ಸ್ವಗತ ೨೩೯

೨೨೫. ಹಂಗರಹಳ್ಳಿ ೨೪೦

೨೨೬. ತಕ್ಕಡಿ ೨೪೧

೨೨೭. ದೂರಾನ್ವಯ ೨೪೨

೨೨೮. ಗುರಿ ೨೪೩

೨೨೯. ನೀವೇ ಪ್ರಮಾಣು – ೧ ೨೪೪

೨೩೦. ನೀವೇ ಪ್ರಮಾಣು – ೨ ೨೪೫

೨೩೧. ಅನಿಸುವುದು ಒಮ್ಮೊಮ್ಮೆ ೨೪೬

೨೩೨. ಭಯೋತ್ಪಾದಕ ೨೪೭

೨೩೩. ಜೀವನ – ಕವಿತೆ –೧ ೨೪೮

೨೩೪. ಜೀವನ – ಕವಿತೆ – ೨ ೨೪೯

೨೩೫. ದೂರದ ನೋಟ ೨೫೦

೨೩೬. ತಿಳಿ ೨೫೧

೨೩೭. ಪ್ರಶ್ನೋತ್ತರ ೨೫೨

೨೩೮. 'ತಾರಣ' (ಸಂವತ್ಸರ) ೨೫೩

ಶತಮಾನೋತ್ಸವ ವರ್ಷ : ೨೦೧೪-೨೦೧೫

ಕನ್ನಡ ಸಾಹಿತ್ಯ ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾದ ಯೋಜನೆ ಕನ್ನಡದ ನೂರು ಮೌಲಿಕ ಗ್ರಂಥಗಳ ಮರುಮುದ್ರಣ. ಈ ಪುಸ್ತಕಗಳ ಆಯ್ಕೆಯಲ್ಲಿ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು ಪರಿಗಣಿಸಲಾಗಿದೆ. ಈ ಅಮೂಲ್ಯ ಕನ್ನಡ ಕೃತಿಗಳನ್ನು ಓದುಗರು ಪ್ರೀತಿ ಅಭಿಮಾನಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮